ವಿಶ್ವವಾಣಿ
ವಿಶ್ವಾಸವೇ ವಿಶ್ವ

ತಪ್ಪಿದ ಫಾಲೋ ಆನ್

ಆಕಾಶದೀಪ (27 ರನ್) ಜಸ್ಪ್ರೀತ್ ಬುಮ್ರಾ (10) ಕೊನೆ ವಿಕೆಟ್ ಜತೆಯಾಟದ ಮೂಲಕ ಭಾರತ ಆಸೀಸ್ ಎದುರು ಫಾಲೋ ಆನ್‌ನಿಂದ ಪಾರಾಗಿದೆ.

ಪುಟ ತೆರೆದಂತೆ...

ಹುಳುಗರುಳು ಛಿದ್ರವಾಗುವುದನ್ನು ತಪ್ಪಿಸಿ!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ರಕ್ಷಣೆಯ ಕಾನೂನೇ ಶೋಷಣೆಯ ಅಸ್ತ್ರ
ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ಒಂದು ದೇಶ ಒಂದು ಚುನಾವಣೆ ವಿಧೇಯಕಕ್ಕೆ ವಿಪಕ್ಷಗಳ ವಿರೋಧ, ವಿಸ್ತೃತ ಪರಾಮರ್ಶೆಗಾಗಿ ಜಂಟಿ ಸದನ ಸಮಿತಿಗೆ ಕಳುಹಿಸಲು ನಿರ್ಧಾರ

ಒಎನ್‌ಒಪಿ ಪರ 269 ವಿರೋಧಿಸಿ 198 ಮತ

ದೆಹಲಿ: ಬಹು ಚರ್ಚಿತ 'ಒಂದು ದೇಶ, ಒಂದು ಚುನಾವಣೆ' ವಿಧೇಯಕವನ್ನು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಲೋಕಸಭೆಯಲ್ಲಿ ಮಂಗಳವಾರ ಮಂಡಿಸಿದರು.

ತೀವ್ರ ಚರ್ಚೆಯ ಬಳಿಕ ವಿಧೇಯಕಕ್ಕೆ ಒಪ್ಪಿಗೆ ಪಡೆಯಲು ಮಂತಯಂತ್ರದ ಮೂಲಕ ನಡೆದ ಮತ ಚಲಾವಣೆ ಪ್ರಕ್ರಿಯೆಯಲ್ಲಿ 269 ಸದಸ್ಯರು ವಿಧೇಯಕದ ಪರವಾಗಿ ಹಾಗೂ 198 ಸದಸ್ಯರು ವಿರೋಧವಾಗಿ ಮತ ಹಾಕಿದ್ದಾರೆ.

ಈ ವಿಧೇಯಕಕ್ಕೆ ಕಾಂಗ್ರೆಸ್ ಸೇರಿ ಅನೇಕ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಈ ಬೆನ್ನಲ್ಲೇ ಈ ವಿಧೇಯಕವನ್ನು ವಿಸ್ತೃತ ಪರಾಮರ್ಶೆಗಾಗಿ ಜಂಟಿ ಸದನ ಸಮಿತಿಗೆ ಕಳುಹಿಸುವ ನಿರ್ಧಾರಕ್ಕೆ ಲೋಕಸಭೆ ಬಂದಿದೆ. ಅಲ್ಲಿ ವಿಸ್ತೃತ ಚರ್ಚೆಯಾಗಿ, ಅಗತ್ಯ ಮಾರ್ಪಾಡುಗಳ ಬಳಿಕ ಮತ್ತೊಂದು ಬಾರಿ ಮಸೂದೆ ಎರಡೂ ಸದನಗಳಲ್ಲಿ ಮಂಡನೆಯಾಗಲಿದ್ದು, ಆಗ ಒಂದು ರಾಷ್ಟ್ರ, ಒಂದು ಚುನಾವಣೆ ಮಸೂದೆಯ ಭವಿಷ್ಯ ನಿರ್ಧಾರವಾಗಲಿದೆ.

ವಿಧಾನಸಭೆ ಚುನಾವಣೆ ಪ್ರತ್ಯೇಕವಾಗಿಯೂ ನಡೆಸಲು ಅವಕಾಶ: ಲೋಕಸಭಾ ಚುನಾವಣೆ ಜತೆಗೆ ವಿಧಾನಸಭಾ ಚುನಾವಣೆ ನಡೆಸಲು ಆಗದ ಸಂದರ್ಭ ಎದುರಾದರೆ ಅದಕ್ಕೆ ಅವಕಾಶ ಕಲ್ಪಿಸುವ ನಿಬಂಧನೆಯನ್ನು ಸೇರಿಸಲಾಗಿದೆ. ಸಂವಿಧಾನದ (129) ತಿದ್ದುಪಡಿ ವಿಧೇಯಕದ 2ನೇ ಉಪ ಕಲಂ 5ರ ಪ್ರಕಾರ ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ ಜತೆಗೆ ಯಾವುದಾದರೂ ವಿಧಾನಸಭೆಯ ಚುನಾವಣೆ ನಡೆಸಲು ಆಗುವುದಿಲ್ಲ ಎಂದು ಚುನಾವಣಾ ಆಯೋಗ ಅಭಿಪ್ರಾಯಪಟ್ಟರೆ ಆ ಕುರಿತು ರಾಷ್ಟ್ರಪತಿಯವರಿಗೆ ಶಿಫಾರಸು ಮಾಡಬಹುದು. ಅದನ್ನು ಆಧರಿಸಿ ರಾಷ್ಟ್ರಪತಿಯವರು ಆ ವಿಧಾನಸಭೆಯ ಚುನಾವಣೆಯನ್ನು ಆ ನಂತರ ನಡೆಸಲು ಆದೇಶ ಹೊರಡಿಸಬಹುದು ಎಂಬ ಅಂಶವನ್ನು ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ.

ಹೊಸ ವಿಧಿ ಮೂರು ತಿದ್ದುಪಡಿ: ಸಂವಿಧಾನದಲ್ಲಿ ಒಂದು ಹೊಸ ವಿಧಿ ಸೇರಿಸಲು ಹಾಗೂ ಮೂರು ವಿಧಿಗಳಿಗೆ ತಿದ್ದುಪಡಿ ತರಲು ವಿಧೇಯಕದಲ್ಲಿ ಪ್ರಸ್ತಾಪ ಮಾಡಲಾಗಿದೆ. ಹೊಸದಾಗಿ 82ಎ ವಿಧಿಯನ್ನು ಸೇರಿಸಲು ವಿಧೇಯಕ ಪ್ರಸ್ತಾಪಿಸಿದೆ. ಅದು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು ಅನುವು ಮಾಡಿಕೊಡುತ್ತದೆ. ಅಲ್ಲದೆ ವಿಧಿ 83 (ಸಂಸತ್ತಿನ ಕಾಲಾವಧಿ) ವಿಧಿ 172 (ರಾಜ್ಯ ಶಾಸಕಾಂಗಗಳ ಕಾಲಾವಧಿ) ಹಾಗೂ ವಿಧಿ 327 ಅನ್ನು (ರಾಜ್ಯ ಶಾಸಕಾಂಗಗಳ ಚುನಾವಣೆ ಸಂಸತ್ತಿಗೆ ಅಧಿಕಾರ ಕುರಿತು) ತಿದ್ದುಪಡಿ ಮಾಡಬೇಕು ಎಂದು ಹೇಳಿದೆ.

ಅಧಿಕಾರಾವಧಿ: ಸಾರ್ವತ್ರಿಕ ಚುನಾವಣೆ ಬಳಿಕ ಲೋಕಸಭೆಯ ಮೊದಲ ಅಧಿವೇಶನದ ದಿನದಂದು ರಾಷ್ಟ್ರಪತಿಯವರು ಅಧಿಸೂಚನೆ ಹೊರಡಿಸಬೇಕು. ಅದನ್ನು 'ನೇಮಕದ ದಿನ' ಎಂದು ಕರೆಯಲಾಗುತ್ತದೆ. ಆ ದಿನದಿಂದ ಲೋಕಸಭೆಯ ಅಧಿಕಾರಾವಧಿ ಐದು ವರ್ಷಗಳಾಗಿರುತ್ತವೆ. ಇದೇ ರೀತಿ ಚುನಾವಣೆ ಬಳಿಕ ನಿಗದಿತ ದಿನದಿಂದ ರಾಜ್ಯ ಶಾಸಕಾಂಗಗಳ ಅಧಿಕಾರಾವಧಿ ಆರಂಭವಾಗುತ್ತದೆ. ಅದು ಲೋಕಸಭೆಯ ಪೂರ್ಣಾವಧಿ ಜತೆಗೆ ಕೊನೆಯಾಗುತ್ತದೆ. ಹೀಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ನಡೆಯುವ ಸಾರ್ವತ್ರಿಕ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಬಹುದು ಎಂದು ವಿಧೇಯಕದಲ್ಲಿ ಹೇಳಲಾಗಿದೆ.

ಸರಕಾರ ಪತನವಾದರೆ ಏನಾಗಲಿದೆ?

ಅತಂತ್ರ ವಿಧಾನಸಭೆ ನಿರ್ಮಾಣವಾದರೆ ಅಥವಾ ಅವಿಶ್ವಾಸ ಮತಯಾಚನೆಯಿಂದ ಸರಕಾರ ಪತನವಾದರೆ, ಹೊಸದಾಗಿ ಚುನಾವಣೆ ನಡೆಯುತ್ತದೆ. ಆಗ ಆಯ್ಕೆಯಾಗುವ ಸರಕಾರ ಮುಂದಿನ ಸಾರ್ವತ್ರಿಕ ಚುನಾವಣೆವರೆಗೂ ಮಾತ್ರ ಇರುತ್ತದೆ. ಅಂದರೆ ಸರಕಾರ ರಚನೆಯಾಗಿ ಎರಡು ವರ್ಷವಾದ ಬಳಿಕ ಸರಕಾರ ಪತನವಾದರೆ, ಮತ್ತೆ ಚುನಾವಣೆ ನಡೆದು ಹೊಸದಾಗಿ ಆಯ್ಕೆಯಾಗುವ ಸರಕಾರ ಎರಡೂವರೆ ಅಥವಾ ಮೂರು ವರ್ಷ ಮಾತ್ರ ಆಡಳಿತ ನಡೆಸಲಿದೆ. ಇದು ವಿಧಾನಸಭೆಗೆ ಮಾತ್ರವಲ್ಲದೇ ಲೋಕಸಭೆಗೂ ಅನ್ವಯವಾಗಲಿದೆ. ಸರಕಾರ ಪತನವಾದರೆ ಬಾಕಿಯಿರುವ ಅವಧಿಗೆ ಮಾತ್ರ ಚುನಾವಣೆ ನಡೆಯಲಿದೆ.

ಹೇಗಿರಲಿದೆ ಚುನಾವಣೆ ವ್ಯವಸ್ಥೆ?

ಒಂದು ದೇಶ, ಒಂದು ಚುನಾವಣೆ ಅನುಷ್ಠಾನವಾದರೆ, ಮೊದಲ ಬಾರಿ ರಾಷ್ಟ್ರಪತಿಗಳು ಲೋಕಸಭೆಯ ಆಡಳಿತ ಅವಧಿಯನ್ನು ನೋಟಿಫಿಕೇಶನ್ ಮಾಡುತ್ತಾರೆ. ಈ ಅಧಿಸೂಚನೆಯಂತೆ ಇಡೀ ದೇಶದ ಎಲ್ಲ ರಾಜ್ಯಗಳ ವಿಧಾನಸಭೆಗೂ ಕೂಡ ಲೋಕಸಭೆಯ ಅವಧಿ ಅನ್ವಯವಾಗಲಿದೆ. ಆ ಸಮಯದಲ್ಲಿ ಹೊಸದಾಗಿ ರಚನೆಯಾದ ರಾಜ್ಯ ಸರಕಾರಗಳ ಅವಧಿ ಮೊಟಕುಗೊಂಡು, ಮುಂದಿನ ಸಾರ್ವತ್ರಿಕ ಚುನಾವಣೆ ವೇಳೆಯೇ ಅವುಗಳಿಗೂ ಚುನಾವಣೆ ನಡೆಯುತ್ತದೆ. ಅಲ್ಲಿಂದ ಒಂದು ರಾಷ್ಟ್ರ ಒಂದು ಚುನಾವಣೆ ಪದ್ಧತಿ ಜಾರಿಗೆ ಬರುತ್ತದೆ.

ವಿಧೇಯಕದಲ್ಲಿರುವ ಅಂಶಗಳು ಏನು?

- ಸಂವಿಧಾನದ 82ಎ ಹಾಗೂ 324ಎ ವಿಧಿಗಳಿಗೆ ತಿದ್ದುಪಡಿ
- ಎರಡು ಹಂತಗಳಲ್ಲಿ ಏಕಕಾಲದ ಚುನಾವಣೆ
- ಮೊದಲು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ
- 100 ದಿನಗಳ ಒಳಗೆ ಮುನಿಸಿಪಾಲಿಟಿ-ಪಂಚಾಯಿತಿ ಎಲೆಕ್ಷನ್
- ಮೂರು ಮಟ್ಟದ ಚುನಾವಣೆಗೆ ಒಂದೇ ಮತದಾರರ ಪಟ್ಟಿ

ಗದ್ದಲ, ಕೋಲಾಹಲಗಳ ನಡುವೆಯೇ ವಿಧಾನಸಭೆಯಲ್ಲಿ ಅಪರೂಪದ ವಿದ್ಯಮಾನ

ರಾತ್ರಿ 1 ಗಂಟೆವರೆಗೂ ನಡೆದ ಸದನ ಕಲಾಪ

ಸುವರ್ಣಸೌಧ ಬೆಳಗಾವಿ: ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಸೋಮವಾರ ತಡರಾತ್ರಿ 1 ಗಂಟೆಯವರೆಗೆ ನಡೆಸುವ ಮೂಲಕ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ವಿಶಿಷ್ಟ ದಾಖಲೆಯೊಂದನ್ನು ಬರೆದಿದ್ದಾರೆ.

ಸೋಮವಾರ ಬೆಳಗ್ಗೆ ಭಾವಚಿತ್ರ ಅನಾವರಣ, ಸಂತಾಪ, ಉತ್ತರ ಕರ್ನಾಟಕದ ಮೇಲಿನ ಚರ್ಚೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದರಿಂದ ಪ್ರಶ್ನೋತ್ತರ ಹಾಗೂ ಗಮನ ಸೆಳೆಯುವ ಸೂಚನೆಗಳನ್ನು ಎತ್ತಿಕೊಂಡಿರಲಿಲ್ಲ. ಆದರೆ ಅಜೆಂಡಾದಲ್ಲಿ 60 ಗಮನ ಸೆಳೆಯುವ ಸೂಚನೆಗಳ ವಿಷಯದ ಚರ್ಚೆ ಸೇರಿಸಲಾಗಿತ್ತು. ಸಂಜೆ ಆರರ ಬಳಿಕ ಪ್ರಶ್ನೋತ್ತರವನ್ನು ಎತ್ತಿಕೊಂಡ ಯು.ಟಿ.ಖಾದರ್ ಅವರು, ಗಮನ ಸೆಳೆಯುವ ಚರ್ಚೆಯನ್ನು 10 ಗಂಟೆಯ ಹೊತ್ತಿಗೆ ಕೈಗೆತ್ತಿಕೊಂಡರು. ಈ ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳುವ ವೇಳೆಗೆ ರಾತ್ರಿ ಒಂದು ಗಂಟೆಯಾಯಿತು. ಇತ್ತೀಚಿನ ವರ್ಷಗಳಲ್ಲಿ ಸುದೀರ್ಘ ಕಾಲ ನಡೆದ ಕಲಾಪ ಎನ್ನುವ ದಾಖಲೆ ಬರೆದಿದೆ.

ಮಂಗಳವಾರ ಬೆಳಗ್ಗೆ ಮಾತನಾಡಿದ ಬೈರತಿ ಬಸವರಾಜ್, ರಾತ್ರಿ ಒಂದು ಗಂಟೆಯ ತನಕ ಸದನ ನಡೆಸುವ ಮೂಲಕ ಗಿನ್ನಿಸ್ ದಾಖಲೆ ಬರೆಯಲು ಸ್ಪೀಕರ್ ಮುಂದಾಗಿದ್ದಾರೆ ಎಂದು ಕಿಚಾಯಿಸಿದರು.

ಶಾಸಕರ ಬೇಸರ

ಖಾದರ್ ಅವರು ತಡರಾತ್ರಿವರೆಗೆ ಸದನ ನಡೆಸಿದ್ದನ್ನು ಮೇಲ್ನೋಟಕ್ಕೆ ಹಲವು ಶಾಸಕರು ಸ್ವಾಗತಿಸಿದ್ದಾರೆ. ಆದರೆ ಆಫ್ ದಿ ರೆಕಾರ್ಡ್ ಮಾತನಾಡುವಾಗ, ಅಜೆಂಡಾ ಮುಗಿಸಬೇಕು ಎನ್ನುವ ಕಾರಣಕ್ಕೆ ಈ ರೀತಿ ಮಾಡುವುದು ಸರಿಯಲ್ಲ. ಮಧ್ಯರಾತ್ರಿ ನಡೆದ ಚರ್ಚೆಯಲ್ಲಿ ಬಹುತೇಕ ಸಚಿವರು ಗೈರಾಗಿದ್ದರು. ದಾಖಲೆಗಳಿಗಾಗಿ ಕಲಾಪದಲ್ಲಿ ವಿಷಯ ಪ್ರಸ್ತಾಪಿಸಿದಂತಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಈ ರೀತಿ ಮಾಡುವ ಬದಲು, ಬದಲಿ ವ್ಯವಸ್ಥೆಗೆ ಚಿಂತಿಸುವುದು ಸೂಕ್ತ. ಸೋಮವಾರ ರಾತ್ರಿ ನಡೆದ ಕಲಾಪದಲ್ಲಿ ಆಯಾ ಶಾಸಕರು ಅವರ ವಿಷಯ ಬರುವ ತನಕ ಮಾತ್ರ ಕೂತಿದ್ದರು. ಆದ್ದರಿಂದ ಮುಂದೆ ಈ ರೀತಿ ತಡರಾತ್ರಿವರೆಗೆ ನಡೆಸುವುದು ಬೇಡ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

- ಇತ್ತೀಚಿನ ವರ್ಷಗಳಲ್ಲಿ ಸುದೀರ್ಘ ಕಾಲ ನಡೆದ ಕಲಾಪ
- ಸುಮಾರು 50ಕ್ಕೂ ಗಮನ ಸೆಳೆವ ವಿಷಯ ಪ್ರಸ್ತಾಪ

ಸಭಾಧ್ಯಕ್ಷರು ಒಂದು ಗಂಟೆವರೆಗೆ ಸದನ ನಡೆಸಿದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ ಸಚಿವರೇ ಇರುವುದಿಲ್ಲ. ಈ ಸರಕಾರ ಏಕ ಸಚಿವ ಸರಕಾರ ಎನ್ನುವಂತಾಗಿದೆ. ಸೋಮವಾರ ರಾತ್ರಿ ಒಂದು ಗಂಟೆಯ ತನಕ ಕಲಾಪ ನಡೆಸಿದಾಗಲೂ ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತ್ರ ಇದ್ದರು. ಮಂಗಳವಾರ ಬೆಳಗ್ಗೆಯೂ ಕೃಷ್ಣಬೈರೇಗೌಡ ಬಿಟ್ಟು ಇನ್ನಾವ ಸಚಿವರೂ ಸದನಕ್ಕೆ ಬಂದಿಲ್ಲ.

-ಸುನೀಲ್ ಕುಮಾರ್ ಶಾಸಕ

ಮಾತಂದ್ರೆ ಮಾತು

1975ರಲ್ಲಿ ಇಂದಿರಾ ಗಾಂಧಿ ಹೇರಿದ ತುರ್ತು ಪರಿಸ್ಥಿತಿ ಒಂದು ಪ್ರಮಾದ. ಆದರೆ, ಅದು ಕೇವಲ 18 ತಿಂಗಳು ಮಾತ್ರ ಇತ್ತು. ಆ ತುರ್ತು ಪರಿಸ್ಥಿತಿ ಅಸ್ಪಷ್ಟವಾಗಿತ್ತು. ಸಂವಿಧಾನದ ಬೆಂಬಲ ಕೂಡ ಇತ್ತು. ಆದರೆ, ಅದು ಅಂತ್ಯವಾಯಿತು. ಆದರೆ, ಈಗ ಇರುವ ಅಘೋಷಿತ ತುರ್ತುಪರಿಸ್ಥಿತಿ ಯಾವಾಗ ಮುಗಿಯುತ್ತದೆ. ಇದನ್ನು ಅಂತ್ಯಗೊಳಿಸಲು ಸಂವಿಧಾನದಲ್ಲಿ ಏನಾದ್ರೂ ಇದೆಯಾ?

ಅಭಿಷೇಕ್ ಮನು ಸಿಂಘ್ವಿ
ಕಾಂಗ್ರೆಸ್ ಹಿರಿಯ ಸಂಸದ

ದಾರಿದೀಪೋಕ್ತಿ

ಸಾಧನೆಯ ಪಥದಲ್ಲಿ ನಡೆಯುವಾಗ ಪ್ರಮಾದ, ಅವಮಾನ, ಸೋಲು, ಹತಾಶೆ, ವಿಷಾದ, ತಿರಸ್ಕಾರಗಳೆಲ್ಲ ಸಹಜ. ಅವರೆಂಥ ಸಾಧಕರೇ ಇರಲಿ, ಇವುಗಳನ್ನು ಎದುರಿಸದೇ ಯಾರೂ ಯಶಸ್ಸಿನ ಶಿಖರ ತಲುಪಿಲ್ಲ. ನಿಮಗೂ ಇಂಥ ಅನುಭವವಾದಾಗ ಕೈಚೆಲ್ಲಬೇಕಿಲ್ಲ.

ವಕ್ರತುಂಡೋಕ್ತಿ

ಯಾರಾದರೂ ಸೋಫಾದ ಮೇಲೆ ಕುಳಿತು ಸುಮ್ಮನೆ ಯೋಚಿಸುತ್ತಿದ್ದರೆ ಸೋಮಾರಿ ಎಂದು ಭಾವಿಸಬೇಕಿಲ್ಲ. ಈ ಜಗತ್ತನ್ನು ಬದಲಿಸುವ ಯೋಚನೆಗೆ ಕಾವು ಕೊಡುತ್ತಿರಬಹುದು.

ಪಾರದರ್ಶಕತೆ, ದಕ್ಷತೆ ಹೆಚ್ಚಿಸಲು ಸರಕಾರ ನಿರ್ಧಾರ

ಮುಡಾ ವಿಧೇಯಕ ಮಂಡನೆ

ಸುವರ್ಣಸೌಧ ಬೆಳಗಾವಿ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಪಾರದರ್ಶಕ ಹಾಗೂ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ವಿಧಾನಸಭೆಯಲ್ಲಿ 'ಮುಡಾ ವಿಧೇಯಕ'ವನ್ನು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಮಂಗಳವಾರ ಮಂಡಿಸಿದರು.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರಕಾರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವನ್ನು ಬಿಡಿಎ ಮಾದರಿಯಲ್ಲಿ ರಚಿಸಲು ತೀರ್ಮಾನಿಸಿತ್ತು. ಇದರ ಮುಂದುವರಿದ ಭಾಗವಾಗಿ ಮಂಗಳವಾರ ವಿಧೇಯಕ ಮಂಡಿಸಲಾಗಿದ್ದು, ಈ ವಿಧೇಯಕದ ಮೂಲಕ ಇಷ್ಟು ದಿನ ನಗರಾಭಿವೃದ್ಧಿ ಇಲಾಖೆಯ ಸುಪರ್ದಿಯಲ್ಲಿದ್ದ ಮುಡಾ ಇನ್ಮುಂದೆ ನಗರಾಭಿವೃದ್ಧಿಯಲ್ಲಿದ್ದರೂ ಬಿಡಿಎಯಂತೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚಿಸಿ ಸ್ವತಂತ್ರ ತೀರ್ಮಾನ ಕೈಗೊಳ್ಳಲು ಅವಕಾಶ ನೀಡಲಾಗಿದೆ.

→ 8

ಏನೇನು ಅಧಿಕಾರ?

ಪ್ರಾಧಿಕಾರ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬಹುದಾಗಿದೆ. ಜತೆಗೆ ಸರಕಾರದ ಪೂರ್ವಾನುಮತಿ ಮೇರೆಗೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬಹುದಾಗಿದೆ. ಭೂ ಸ್ವಾಧೀನ, ಸುಧಾರಣಾ ತೆರಿಗೆ ವಿಧಿಸುವ ಅಧಿಕಾರ, ಭೂಮಿ ಮತ್ತು ಕಟ್ಟಡಗಳಿಗೆ ತೆರಿಗೆ ವಿಧಿಸುವುದು, ರಸ್ತೆ ನಿರ್ವಹಣೆ, ಬಡಾವಣೆ ನಿರ್ಮಾಣ ಸೇರಿದಂತೆ ಕೆಲ ಹೆಚ್ಚುವರಿ ಅಧಿಕಾರ ನೀಡಲಾಗಿದೆ.

1,394 ಔಷಧಗಳು ಗುಣಮಟ್ಟ ಹೊಂದಿಲ್ಲ

ದೆಹಲಿ: 2023-24ರಲ್ಲಿ 1,394 ಔಷಧಗಳು ಪ್ರಮಾಣಿತ ಗುಣಮಟ್ಟ ಪರೀಕ್ಷೆಯಲ್ಲಿ ವೈಫಲ್ಯ ಕಂಡಿವೆ ಎಂದು ಕೇಂದ್ರ ಸರಕಾರವು ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.



2019-20ರಲ್ಲಿ 950 ಹಾಗೂ 2022-23ರಲ್ಲಿ 1,171 ಔಷಧಗಳು ಪ್ರಮಾಣಿತ ಗುಣಮಟ್ಟ ಹೊಂದಿರಲಿಲ್ಲವೆಂದು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆ ವರದಿ ನೀಡಿದೆ ಎಂದು ಕೇಂದ್ರ ಆರೋಗ್ಯ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಕಳಪೆ ಗುಣಮಟ್ಟ ಹೊಂದಿರುವ ತಯಾರಿಸಿದ ಕಂಪನಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗಿದೆ ಎಂದು ರಾಜ್ಯಸಭೆಗೆ ತಿಳಿಸಿದ್ದಾರೆ.

ಉನ್ನತಮಟ್ಟದ ತನಿಖೆಗೆ ಸರಕಾರ ಸಿದ್ಧ: ಗುಂಡೂರಾವ್

ಬಾಣಂತಿಯರ ಸಾವು: ಚರ್ಚೆ

ಸುವರ್ಣಸೌಧ: ಬಳ್ಳಾರಿಯಲ್ಲಿ ಬಾಣಂತಿಯರ ಸರಣಿ ಸಾವಿನ ಪ್ರಕರಣವನ್ನು ಎಸ್‌ಐಟಿ ಅಥವಾ ನ್ಯಾಯಾಂಗದ ಮೂಲಕ ತನಿಖೆ ನಡೆಸಲು ಸರಕಾರ ಸಿದ್ಧವಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಬಾಣಂತಿಯರ ಸಾವಿನ ಬಗ್ಗೆ ವಿಶೇಷ ಚರ್ಚೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಹೆಚ್ಚುತ್ತಿರುವ ಬಾಣಂತಿಯರ ಸಾವಿಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಎಸ್‌ಐಟಿ ಹಾಗೂ ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡುತ್ತಿದ್ದು, ಸರಕಾರ ಈ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಸಿದ್ಧವಿದೆ. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಕಲಬುರಗಿಯಲ್ಲಿ ಮತ್ತೊಂದು ಮರಣ

ಕಲಬುರಗಿ: ಜಿಲ್ಲಾ ಆಸ್ಪತ್ರೆಯಲ್ಲಿ ಅಫಜಲಪುರ ತಾಲೂಕಿನ ಬಾಣಂತಿಯೊಬ್ಬರು ಮಂಗಳವಾರ ಮೃತಪಟ್ಟಿದ್ದಾರೆ. ಅಫಜಲಪುರ ತಾಲೂಕಿನ ಹವಳಗಾ ಗ್ರಾಮದ ಭಾಗ್ಯಶ್ರೀ ಶಿವಾಜಿ (22) ಮೃತ ಬಾಣಂತಿ.

ವೈದ್ಯರ ನಿರ್ಲಕ್ಷವೇ ಬಾಣಂತಿ ಸಾವಿಗೆ ಕಾರಣವೆಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಮಧ್ಯಂತರ ವಾರ್ಷಿಕ ವರದಿ ಮಂಡನೆ

ಸುವರ್ಣಸೌಧ ಬೆಳಗಾವಿ: ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಸರಕಾರ ಮಂಡಿಸಿದೆ. ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದರೂ, 27534 ಕೋಟಿ ರು. ರಾಜಸ್ವ ಕೊರತೆಯಿದೆ ಎನ್ನುವುದು ಮಧ್ಯ ವಾರ್ಷಿಕ ಪರಿಶೀಲನಾ ವರದಿಯಲ್ಲಿ ಬಹಿರಂಗವಾಗಿದೆ.

- 27,534 ಕೋಟಿ ರು. ರಾಜಸ್ವ ಕೊರತೆ
- ಜಿಎಸ್‌ಟಿ ಸಂಗ್ರಹದಲ್ಲಿ 2ನೇ ಸ್ಥಾನ

ಈ ವರದಿಯಲ್ಲಿ ರಾಜಸ್ವದ ಕೊರತೆಯ ಹೊರತಾಗಿಯೂ, ರಾಜ್ಯದ ಪಾಲಿನ ಜಿಎಸ್‌ಟಿ (ಎಸ್‌ಜಿಎಸ್‌ಟಿ) ಸಂಗ್ರಹದಲ್ಲಿ ಕರ್ನಾಟಕವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವಿತ್ತೀಯ (2024-25) ವರ್ಷದಲ್ಲಿ ಜಿಎಸ್‌ಟಿ ಸಂಗ್ರಹದಲ್ಲಿ ಶೇ.11ರಷ್ಟು ಬೆಳವಣಿಗೆಯಾಗಿದೆ. ಇದು ವರ್ಷದ ಮೊದಲಾರ್ಧದ ಸಂಗ್ರಹವಾಗಿದೆ ಎಂದು ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ವರದಿ ತಿಳಿಸಿದೆ.

ಡಿ ಗ್ಯಾಂಗ್ ವಿರುದ್ಧ ಮೇಲ್ಮನವಿಗೆ ಸಿದ್ಧತೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿ 7 ಆರೋಪಿಗಳಿಗೆ ಹೈಕೋರ್ಟ್ ಜಾಮೀನು ಮಂಜೂರು ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್ ಮೊರೆ ಹೋಗಲು ಪೊಲೀಸರು ನಿರ್ಧರಿಸಿದ್ದಾರೆ. ಈ ಕುರಿತು ಗೃಹ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಪೂರ್ವಾನುಮತಿ ದೊರೆತ ಬಳಿಕ ಸುಪ್ರೀಂನಲ್ಲಿ ಪ್ರಶ್ನಿಸುವುದಾಗಿ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ತಿಳಿಸಿದ್ದಾರೆ.

ಫೆಬ್ರವರಿಗೆ ಬಿಜೆಪಿ ಅಧ್ಯಕ್ಷರ ಬದಲು?

ದೆಹಲಿ: ಬಿಜೆಪಿಗೆ ಹೊಸ ರಾಷ್ಟ್ರೀಯ ಅಧ್ಯಕ್ಷರನ್ನು ಫೆಬ್ರವರಿ ಮಾಸಾಂತ್ಯದಲ್ಲಿ ಆಯ್ಕೆ ಮಾಡುವ ಸಾಧ್ಯತೆಯಿದೆ. ಬಿಜೆಪಿಯ ರಾಜ್ಯ ಘಟಕಗಳಲ್ಲಿ ಶೇ.60ರಷ್ಟರಲ್ಲಿ ಅಧ್ಯಕ್ಷರ ಅಧಿಕಾರಾವಧಿ ಪೂರ್ಣಗೊಂಡಿದೆ. ಈ ರಾಜ್ಯ ಘಟಕಗಳಿಗೆ ಹೊಸ ಅಧ್ಯಕ್ಷರನ್ನು ಜನವರಿಯಲ್ಲಿ ನೇಮಕ ಮಾಡುವ ಸಾಧ್ಯತೆಯಿದೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಬಿಲ್ಡರ್‌ಗಳಿಗೆ ಐಟಿ ಶಾಕ್; 5 ಕಡೆ ದಾಳಿ

ಬೆಂಗಳೂರು: ತೆರಿಗೆ ವಂಚನೆ ಆರೋಪದ ಮೇಲೆ ಬೆಂಗಳೂರಿನಲ್ಲಿನ ಬಿಲ್ಡರ್‌ಗಳಿಗೆ ಸಂಬಂಧಿಸಿದ ಐದು ಕಡೆ ಐಟಿ ಅಧಿಕಾರಿಗಳು ಏಕಕಾಲಕ್ಕೆ ದಾಳಿ ಮಾಡಿದ್ದಾರೆ. ಒಂದೇ ತಿಂಗಳ ಅಂತರದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಮೂರನೇ ದಾಳಿ ಇದಾಗಿದೆ. ಕಳೆದ ತಿಂಗಳು ನ.27 ರಂದು ಬೆಂಗಳೂರಿನ 25ಕ್ಕೂ ಹೆಚ್ಚು ಕಡೆ ಉದ್ಯಮಿಗಳು, ಬಿಲ್ಡರ್‌ಗಳ ಮನೆ ಮತ್ತು ಕಚೇರಿ ಮೇಲೆ ಏಕಕಾಲಕ್ಕೆ ದಾಳಿ ಮಾಡಿದ್ದರು.

ಪಾಕ್‌ನಲ್ಲಿ ಪ್ರಿಯಾಂಕಾ ಗಾಂಧಿ ಗುಣಗಾನ

ದೆಹಲಿ: ಪ್ರಿಯಾಂಕಾ ಗಾಂಧಿ ಅವರು ಅಧಿವೇಶನಕ್ಕೆ 'ಪ್ಯಾಲೆಸ್ತೀನ್' ಎಂದು ಬರೆದಿರುವ ಬ್ಯಾಗ್ ಹಿಡಿದು ಹೋಗಿರುವುದಕ್ಕೆ ಪಾಕಿಸ್ತಾನದ ಮಾಜಿ ಸಚಿವ ಚೌಧರಿ ಫವಾದ್ ಹುಸೇನ್ ಶ್ಲಾಘಿಸಿದ್ದಾರೆ. ನೆಹರು ಅವರಂತಹ ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಮೊಮ್ಮಗಳಿಂದ ಇನ್ನೇನು ನಿರೀಕ್ಷಿಸಬಹುದು? ಕುಬ್ಜರ ನಡುವೆ ಪ್ರಿಯಾಂಕಾ ಗಾಂಧಿ ಎತ್ತರವಾಗಿ ನಿಲ್ಲುತ್ತಾರೆ ಎಂದು ಟ್ವೀಟ್ ಮಾಡಿದ್ದಾರೆ.

ಸಂಧ್ಯಾ ಚಿತ್ರಮಂದಿರ ಆಡಳಿತಕ್ಕೆ ನೋಟಿಸ್

ಹೈದರಾಬಾದ್: 'ಪುಷ್ಪ-2' ಚಿತ್ರಪ್ರದರ್ಶನದ ವೇಳೆ ನೂಕುನುಗ್ಗಲು ಸಂಭವಿಸಿದ್ದ ಪ್ರಕರಣದ ಸಂಬಂಧ 'ಸಂಧ್ಯಾ 70 ಎಂಎಂ' ಚಿತ್ರಮಂದಿರದ ಆಡಳಿತವರ್ಗಕ್ಕೆ ಪೊಲೀಸರು ಎರಡು ಪುಟಗಳ ನೋಟಿಸ್ ನೀಡಿದ್ದಾರೆ. ನೋಟಿಸ್‌ನಲ್ಲಿ ಪೊಲೀಸರು ಒಟ್ಟು 11 ತಪ್ಪುಗಳನ್ನು ಪಟ್ಟಿ ಮಾಡಿದ್ದಾರೆ. ಸುರಕ್ಷತಾಕ್ರಮ ಕೈಗೊಳ್ಳದಿರುವ ಕಾರಣಕ್ಕೆ ಏಕೆ ಲೈಸೆನ್ಸ್ ರದ್ದುಪಡಿಸಬಾರದು? ಎಂದು ಪ್ರಶ್ನಿಸಿದ್ದಾರೆ.



ಫನ್‌ತರಂಗ

- ರಘುಪತಿ ಶೃಂಗೇರಿ -

'ನನಗಿಂತ ಬೆಕ್ಕನ್ನೇ ಜಾಸ್ತಿ ಪ್ರೀತಿಸ್ತಾನೆ' ಎಂದು ಗಂಡನ ಮೇಲೆ ಕೇಸ್ ದಾಖಲಿಸಿದ ಮಹಿಳೆ



ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶ 7.5 ಡಿ.ಸೆ., ವಿಜಯಪುರದಲ್ಲಿ 8.5 ಡಿ.ಸೆ. ದಾಖಲು

ಮೈ ಕೊರೆಯುತ್ತಿರುವ ಚಳಿಗೆ ಕಲ್ಯಾಣ ಕರ್ನಾಟಕ ಗಡ ಗಡ

ಕಲಬುರಗಿ: ಕಳೆದ ಮೂರು ದಿನಗಳಿಂದ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಚಳಿ ಹೆಚ್ಚುತ್ತಿದ್ದು, ಜನರನ್ನು ನಡುಗಿಸುತ್ತಿದೆ. ಬೀದರ್ ಜಿಲ್ಲೆಯಲ್ಲಿ ಸೋಮವಾರ ಮತ್ತು ಮಂಗಳವಾರ ರಾಜ್ಯದಲ್ಲೇ ಅತಿ ಕಡಿಮೆ ತಾಪಮಾನ ದಾಖಲಾಗಿದೆ.

ಭಾರತೀಯ ಹವಾಮಾನ ಇಲಾಖೆಯ ವರದಿ ಪ್ರಕಾರ, ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶ 7.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ 8.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಜನವರಿಯಲ್ಲಿ ಚಳಿ ಇನ್ನಷ್ಟು ಹೆಚ್ಚಲಿದ್ದು, ದಾಖಲೆಯ ಅತಿ ಕಡಿಮೆ ತಾಪಮಾನ ದಾಖಲಾಗಲಿದೆ ಎಂದು ತಿಳಿಸಿದೆ.

ಬೀದರ್ ಜಿಲ್ಲೆಯಲ್ಲಿ 2023ರ ಜನವರಿ 9ರಂದು ತಾಪಮಾನ 5.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಈ ವರ್ಷ ಆ ದಾಖಲೆಯನ್ನು ದಾಟಿ 5 ಡಿಗ್ರಿ ಸೆಲ್ಸಿಯಸ್‌ಗೆ ಉಷ್ಣಾಂಶ ಇಳಿಯುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ. ರಾಯಚೂರಿನಲ್ಲಿ 13 ಡಿಗ್ರಿ ಸೆಲ್ಸಿಯಸ್ ಹಾಗೂ ಕಲಬುರಗಿಯಲ್ಲಿ 13 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಥಂಡಾ ಹೊಡೆದ ಬೆಂಗಳೂರಿಗರು; ಬೆಂಗಳೂರು ನಗರದಲ್ಲಿ ಈ ಬಾರಿ ಭಾರೀ ಚಳಿ ಶುರುವಾಗಿದ್ದು, ಮಂಗಳವಾರದ ಬಳಿಕ ಡಿಸೆಂಬರ್ ತಿಂಗಳಲ್ಲೇ ಅತಿ ಹೆಚ್ಚು ಚಳಿ ದಾಖಲಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಈ ವರ್ಷ ಸುರಿದ ಭಾರಿ ಮಳೆಯಿಂದಾಗಿ ಚಳಿಯ ಪ್ರಮಾಣ ಹೆಚ್ಚಾಗಿದ್ದು, ಈ ಮೂಲಕ 14 ವರ್ಷಗಳ ದಾಖಲೆ ಮುರಿಯಲಿದೆ. 2011 ಡಿ.24ರಂದು ಬೆಂಗಳೂರಿನಲ್ಲಿ 12.8 ಡಿ.ಸೆ.ಗೆ ಕುಸಿದಿದ್ದು ಈವರೆಗಿನ ದಾಖಲೆಯಾಗಿತ್ತು. 1884 ಜನವರಿ 13ರಂದು ಬೆಂಗಳೂರಿನಲ್ಲಿ ತಾಪಮಾನ 7.8 ಡಿ.ಸೆ.ಗೆ ಕುಸಿದಿದ್ದು ಈವರೆಗಿನ ದಾಖಲೆಯಾಗಿದೆ. ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರು ತಾಪಮಾನ ಸರಾಸರಿ ಕನಿಷ್ಠ 15.7 ಡಿ.ಸೆ. ಇರುತ್ತದೆ. ಭಾನುವಾರ ರಾತ್ರಿ 15.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಎಚ್‌ಎಎಲ್ ವಿಮಾನ ನಿಲ್ದಾಣದ ಪ್ರದೇಶದಲ್ಲಿ 14.7 ಡಿ.ಸೆ. ಮತ್ತು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 14.5 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತವಾಗಿತ್ತು.

- ಜನವರಿಯಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಚಳಿ ಇನ್ನಷ್ಟು ಹೆಚ್ಚಳ, ಅತಿ ಕಡಿಮೆ ತಾಪಮಾನ ದಾಖಲು
- ಬಿಸಿಲಿನ ಹೊಡೆತಕ್ಕೆ ಮಣಿಯದ ಜನರು ಕೊರೆಯುವ ಚಳಿಗೆ ತತ್ತರಿಸಿ ಹೋಗಿದ್ದಾರೆ
- ಬೆಂಗಳೂರಿನಲ್ಲಿ ತಾಪಮಾನ 12.8 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತ, 14 ವರ್ಷಗಳ ಬಳಿಕ 7.8 ಕ್ಕಿಂತ ಕೆಳಕ್ಕಿಳಿಯುವ ಸಾಧ್ಯತೆ

ಡಿ.26ರಂದು ಎಐಸಿಸಿ ಕಾರ್ಯಕಾರಿ ಸಭೆ ಆಯೋಜನೆ: ಕೆ.ಸಿ.ವೇಣುಗೋಪಾಲ್

ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

1924ರಲ್ಲಿ ಬೆಳಗಾವಿ ನೆಲದಲ್ಲಿ ಮಹಾತ್ಮಾ ಗಾಂಧಿ ಅಧ್ಯಕ್ಷತೆ ವಹಿಸಿದ್ದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವವನ್ನು ಅರ್ಥಪೂರ್ಣ ಆಚರಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿದ್ದು, ಡಿ.26ರಂದು ಎಐಸಿಸಿ ಕಾರ್ಯಕಾರಿ ಸಭೆ ಆಯೋಜನೆ ಮಾಡಲಾಗುವುದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದರು.

ಬೆಳಗಾವಿಯ ಸಿ.ಪಿ.ಎಡ್ ಮೈದಾನದಲ್ಲಿ ಡಿಸೆಂಬರ್ 26 ಹಾಗೂ 27 ರಂದು ನಡೆಯಲಿರುವ 'ಗಾಂಧಿ ಭಾರತ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ' ಕಾರ್ಯಕ್ರಮದ ಅಂಗವಾಗಿ ಸಿದ್ಧತಾ ಸಭೆ ಉದ್ದೇಶಿಸಿ ಮಂಗಳವಾರ ನಗರದ ಕಾಂಗ್ರೆಸ್ ಭವನದಲ್ಲಿ ಮಾತನಾಡಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮಾ ಗಾಂಧೀಜಿ ಶಾಂತಿಯುತ, ಅಹಿಂಸಾತ್ಮಕ ಹೋರಾಟಕ್ಕೆ ಕರೆ ನೀಡಿದ್ದರು.

→ 8



ಬೆಳಗಾವಿಯ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿದರು. ಸಿಎಂ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸಿಂಗ್ ಸುರ್ಜೇವಾಲಾ, ಕೆ.ಸಿ.ವೇಣುಗೋಪಾಲ್ ಮತ್ತಿತರರು ಇದ್ದರು.

ಬೆಳಗಾವಿ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಕಾರ್ಯಕ್ರಮ ಹಿನ್ನೆಲೆಯಲ್ಲಿ ಬೆಳಗಾವಿ ಸುವರ್ಣಸೌಧದ ಮುಂದೆ ಮಹಾತ್ಮಾ ಗಾಂಧಿಯವರ ಪುತ್ಥಳಿ ಅನಾವರಣ ನಡೆಯಲಿದ್ದು, ಎಲ್ಲ ಪಕ್ಷಗಳ ಮುಖಂಡರಿಗೂ ಆಹ್ವಾನ ನೀಡಲಿದ್ದೇವೆ. ರಾಜ್ಯಾದ್ಯಂತ ಪಕ್ಷಭೇದ ಮರೆತು ಜನರು ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಬೆಳಗಾವಿ ಮುಖಂಡರ ಸಭೆ ನಡೆಸಲಾಗಿದ್ದು, ಕಾರ್ಯಕ್ರಮದ ತಯಾರಿ ನಡೆಯುತ್ತಿವೆ.

ಡಿ.ಕೆ.ಶಿವಕುಮಾರ್ ಡಿಸಿಎಂ

ಸಮಾಚಾರ ಸಣ್ಣದಲ್ಲ

ಬೆಂಗಳೂರು ವಿವಿ ವಿಚಾರ ಸಂಕಿರಣ

ಬೆಂಗಳೂರು: ಭವಿಷ್ಯದ ನಗರಗಳ ಸುಸ್ಥಿರ ಅಭಿವೃದ್ಧಿಗಾಗಿ ಬಹುಶಿಸ್ತಿನ ವಿಧಾನ ಮತ್ತು ನವೀನ ಉದಯೋನ್ಮುಖ ತಂತ್ರಜ್ಞಾನಬಳಕೆ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಬೆಂಗಳೂರು ವಿಶ್ವವಿದ್ಯಾಲಯದ ಭೌಗೋಳಿಕ ಮತ್ತು ಭೌಗೋಳಿಕ ಮಾಹಿತಿ ವಿಭಾಗದಲ್ಲಿ ಡಿ.19ಮತ್ತು20ರಂದು ನಡೆಯಲಿದೆ. ಇದು ಯೂನಿಯನ್ ಆಫ್ ಜಿಯೋ ಗ್ರಾಫಿಕ್ ಇನ್ವೆಸ್ಟಿಗೇಷನ್ ಟೆಕ್ನಾಲಜಿಸ್ಟ್ ಸಂಘಟಿಸುತ್ತಿರುವ 13ನೇ ಅಂತಾರಾಷ್ಟ್ರೀಯ ಸಮ್ಮೇಳನವಾಗಿದೆ. ವಿವಿ ಕುಲಪತಿ ಪ್ರೊ.ಎಸ್. ಎಂ. ಜಯಕರ, ಕುಲಸಚಿವ ಶೇಖ್ ಲತೀಫ್, ಪ್ರೊ.ಡಾ.ಅಶೋಕ ಡಿ.ಹಂಜಗಿ, ಡಾ.ಎಚ್.ಪಿ.ರವಿ, ವಿ. ರಶ್ಮಿ, ಡಾ. ಪ್ರಸನ್ನಪ್ರಭು ಸಂಪೂರ್ಣ ಸ್ವರಾಜ್ ಫೌಂಡೇಶನ್‌ನ ಡಾ. ಶಂಕರಪ್ರಸಾದ್ ಸೇರಿದಂತೆ ಅಂತಾರಾಷ್ಟ್ರೀಯ ಹಲವಾರು ತಜ್ಞರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸ್ನೇಹಮಯಿ ವಿರುದ್ಧ ಪ್ರಕರಣಕ್ಕೆ ಹೈ ತಡೆ

ಬೆಂಗಳೂರು: ಮುಡಾ ಪ್ರಕರಣದ ದೂರುದಾರ, ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ಎಫ್‌ಐಆರ್‌ಗೆ ಕರ್ನಾಟಕ ಹೈಕೋರ್ಟ್ ತಡೆ ನೀಡಿದೆ. ಮೈಸೂರಿನ ಚಾಮುಂಡೇಶ್ವರಿ ಬೆಟ್ಟದ ಕಾರ್ಯದರ್ಶಿ ರೂಪ ಅವರು ನೀಡಿದ್ದ ಕರ್ತವ್ಯಕ್ಕೆ ಅಡ್ಡಿಪಡಿಸಿದ ದೂರು ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಹೈಗೆ ಅರ್ಜಿ ಸಲ್ಲಿಸಿದ್ದರು. ಚಾಮುಂಡಿಬೆಟ್ಟದ ಕಾರ್ಯ ದರ್ಶಿ ರೂಪಾ ಅವರು ಸ್ನೇಹಮಯಿ ಕೃಷ್ಣ ವಿರುದ್ಧ ದಾಖಲಿಸಿದ್ದ ಪ್ರಕರಣಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿ ಆದೇಶ ಹೊರಡಿಸಿದೆ. ಚಾಮುಂಡೇಶ್ವರಿ ದೇವಿಗೆ ಬಂದಿರುವ ಹರಕೆ ಸೀರೆ ಮಾರಾಟ ಮಾಡಲಾಗುತ್ತಿದೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದರು. ಆದರೆ ಈ ದೂರು ದಾಖಲಿಸಿಕೊಳ್ಳದೇ ಕೃಷ್ಣ ವಿರುದ್ಧವೇ ಎಫ್ ಐಆರ್ ದಾಖಲಾಗಿತ್ತು.

ನೈಜೀರಿಯನ್ ಮೂಲದ ಡ್ರಗ್‌ಪೆಡ್ಲರ್ ಮಹಿಳೆ ಬಂಧನ | ಗ್ರಾಸರಿ ಪಾಕೆಟ್‌ನಲ್ಲಿ ಇಟ್ಟು ಮಾರಾಟ

24 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ಅಪರಾಧ ಸುದ್ದಿಗಳು

ಬೆಂಗಳೂರು: ಹೊಸ ವರ್ಷದ ಹೊಸ್ತಿಲಲ್ಲೇ ಬೆಂಗಳೂರಿನ ನಶೆ ಮಂದಿಗೆ ಪೊಲೀಸ್ ಇಲಾಖೆ ಬಿಗ್ ಶಾಕ್ ಕೊಟ್ಟಿದೆ. ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದಿಂದ ಭರ್ಜರಿ ಕಾರ್ಯಾಚರಣೆ ನಡೆಸಿ ಬರೋಬ್ಬರಿ 24 ಕೋಟಿ ಮೌಲ್ಯದ 12 ಕೆಜಿ ಎಂಡಿಎಂಎ ಕ್ರಿಸ್ಟಲ್ ವಶಕ್ಕೆ ಪಡೆದಿದ್ದಾರೆ.

ಈ ಬಗ್ಗೆ ಬೆಂಗಳೂರು ನಗರ ಆಯುಕ್ತ ಬಿ.ದಯಾನಂದ್ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ್ದು, ಬೆಂಗಳೂರಿನಲ್ಲಿ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಡ್ರಗ್ ಜಪ್ತಿ ಮಾಡಲಾಗಿದೆ. ಸಿಸಿಬಿ ಪೊಲೀಸರಿಂದ ಬರೋಬ್ಬರಿ 24 ಕೋಟಿ ರು. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು. ನೈಜೀರಿಯನ್ ಮೂಲದ ರೋಜ್‌ಲೆಮ್ (40)ಎಂಬ ಮಹಿಳೆ ಬಂಧನ ಮಾಡಲಾಗಿದೆ. ಈ



ಮಹಿಳೆ ಕೆ.ಆರ್.ಪುರಂನ ಟಿಸಿ ಪಾಳ್ಯದಲ್ಲಿ ಅಂಗಡಿ ಇಟ್ಟುಕೊಂಡಿದ್ದಳು. ಇಲ್ಲಿಯೇ ಡ್ರಗ್ಸ್ ದಂಧೆ ನಡೆಸುತ್ತಿದ್ದಳು. ಗ್ರಾಸರಿ ಐಟಂಗಳ ಪಾಕೆಟ್ ನಲ್ಲಿ ಡ್ರಗ್ಸ್ ಇಟ್ಟು ಮಾರಾಟ ಮಾಡ್ತಿದ್ದಳು. ಬಂಧಿತ ಮಹಿಳೆಯಿಂದ 12 ಕೆಜಿ ತೂಕದ ಬಿಳಿ ಮತ್ತು ಹಳದಿ ಬಣ್ಣದ ಎಂಡಿಎಂಎ ಕ್ರಿಸ್ಟಲ್ ವಶಕ್ಕೆ ಪಡೆಯಲಾಗಿದೆ. ಮುಂಬೈನಿಂದ ಫುಡ್ ಐಟಂಗಳಲ್ಲಿ ಬೆಂಗಳೂರಿಗೆ ಡ್ರಗ್ಸ್ ರವಾನೆ ಮಾಡಲಾಗುತ್ತಿತ್ತು. ಈ ನೈಜಿರಿಯಾ ಮಹಿಳೆಗೆ ವಿದೇಶಿ ಮೂಲದ ಮಹಿಳೆ ಜುಲೀಯಟ್ ಎಂಬಾಕೆ ಡ್ರಗ್ಸ್ ರವಾನೆ ಮಾಡುತ್ತಿದ್ದಳು. ಈಕೆ ಅದನ್ನು ಅಂಗಡಿಯಲ್ಲಿಟ್ಟುಕೊಂಡು ಸ್ಥಳೀಯ ನಿವಾಸಿಗಳು, ನೈಜಿರಿಯನ್ ಪ್ರಜೆಗಳಿಗೆ ಮಾರಾಟ ಮಾಡುತ್ತಿದ್ದಳು. ಈ ಬಗ್ಗೆ ಮಾಹಿತಿ ತಿಳಿದು ಶುಕ್ರವಾರ ಅಂಗಡಿ ಬಳಿ ಹೋಗಿದ್ದ ಸಿಸಿಬಿ ಟೀಂ ಕೈಯಲ್ಲಿ ಆರೋಪಿ ರೋಜ್‌ಲೆಮ್ ರೆಡ್ ಹ್ಯಾಂಡಗಿ ಸಿಕ್ಕಿಬಿದ್ದಿದ್ದಾಳೆ. ಆದರೆ ದೆಹಲಿಯಿಂದ ಡ್ರಗ್ಸ್ ತಂದಿದ್ದ ಜೂಲಿಯಟ್ ಎಂಬ ಮಹಿಳೆ ಪರಾರಿಯಾಗಿದ್ದಾಳೆ.

ಬಂಧಿತ ಆರೋಪಿಯಿಂದ 70 ಸಿಮ್‌ಗಳನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ರೋಜ್‌ಲೆಮ್ ಐದು ವರ್ಷದ ಹಿಂದೆ ಬೆಂಗಳೂರಿಗೆ ಬಂದಿದ್ದಾಳೆ. ಆದರೆ ವೀಸಾ ಅವಧಿ ಮುಗಿದರೂ ಬೆಂಗಳೂರಿನಲ್ಲಿ ವಾಸವಿದ್ದಾಳೆ. ಸದ್ಯ ಕೆ.ಆರ್.ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪರಾರಿಯಾಗಿರುವ ಮತ್ತೋರ್ವ ಆರೋಪಿಗಾಗಿ ಶೋಧಕಾರ್ಯ ನಡೆಸಲಾಗಿದೆ. ಹೊಸ ವರ್ಷಾಚರಣೆ ಹಿನ್ನೆಲೆ ಮಾದಕ ವಸ್ತುಗಳ ಸಂಗ್ರಹಕ್ಕೆ ಮುಂದಾಗಿದ್ದ ಆರೋಪಿಗಳಿಗೆ ಪೊಲೀಸರು ಬಿಗ್ ಶಾಕ್ ಕೊಟ್ಟಿದ್ದಾರೆ. ನಗರದ ವಿವಿಧ ಕಡೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ.

76 ಕೆ.ಜಿ ಗಾಂಜಾ ವಶ



ಅಶೋಕನಗರ ಪೊಲೀಸರಿಂದ 76ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ. ಇದು 30 ಲಕ್ಷ ಮೌಲ್ಯದ್ದು ಎಂದು ಹೇಳಲಾಗಿದೆ. ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಸ್ಮಶಾನದ ಬಳಿ ಗಾಂಜಾ ಮಾರಾಟ ಮಾಡುತ್ತಿರುವ ಮಾಹಿತಿ ಆಧರಿಸಿ ಪೊಲೀಸರ ಕಾರ್ಯಾಚರಣೆ ನಡೆಸಿದ್ದಾರೆ. ಬಾಣಸವಾಡಿ ಪೊಲೀಸರಿಂದ 15 ಲಕ್ಷ ಮೌಲ್ಯದ 15ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ. ಮಾರಾಟ ಮಾಡಲು ಯತ್ನಿಸುತ್ತಿದ್ದ ವ್ಯಕ್ತಿ ವಶಕ್ಕೆ ಪಡೆಯಲಾಗಿದೆ. ಅಮೃತಹಳ್ಳಿ ಪೊಲೀಸರಿಂದ 1.5ಲಕ್ಷ ಮೌಲ್ಯದ 5ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ. ಒಡಿಸ್ಸಾ ರಾಜ್ಯದಿಂದ ಕಡಿಮೆ ಬೆಲೆಗೆ ಗಾಂಜಾ ತಂದು ಮಾರಾಟಕ್ಕೆ ಮುಂದಾಗಿದ್ದ ಆರೋಪಿಗಳು ಇದೀಗ ಜೈಲು ಸೇರಿದ್ದಾರೆ. ಒಟ್ಟು 11 ಆರೋಪಿಗಳನ್ನ ಬಂಧಿಸಿ 190 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ. ಕಳೆದ ಒಂದು ವಾರದಿಂದ ನಗರದಲ್ಲಿ 1.20 ಕೋಟಿ ಮೌಲ್ಯದ ಗಾಂಜಾ ವಶಕ್ಕೆ ಪಡೆಯಲಾಗಿದೆ ಎಂದು ಬೆಂಗಳೂರು ನಗರ ಆಯುಕ್ತರಾದ ಬಿ.ದಯಾನಂದ್ ತಿಳಿಸಿದ್ದಾರೆ.

ಭರ್ಜರಿ ಕಾರ್ಯಾಚರಣೆ

ಹೊಸ ವರ್ಷಕ್ಕೆ ಕಿಕ್ಕೇರಿಸಲು ರೆಡಿಯಾಗಿದ್ದ ಗಾಂಜಾವನ್ನು ಯಲಹಂಕ ಪೊಲೀಸರು ಜಪ್ತಿ ಮಾಡಿದ್ದಾರೆ. ಟ್ರಕ್, ಇನ್ನೋವಾ ಕಾರಿನಲ್ಲಿ ಗಾಂಜಾ ಸಾಗಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಹೊಸ ವರ್ಷದ ಸಂದರ್ಭದಲ್ಲಿ ಹೆಚ್ಚು ಬೆಲೆಗೆ ಗಾಂಜಾ ಮಾರಾಟ ಮಾಡಲು ಆರೋಪಿಗಳು ಪ್ಲಾನ್ ಮಾಡಿದ್ದರು. ಆದರೆ ಇದೀಗ ಪೊಲೀಸರ ಕೈಯಲ್ಲಿ ತಗಲಾಕೊಂಡಿದ್ದಾರೆ. ಬಂಧಿತರಿಂದ 74 ಲಕ್ಷ ಮೌಲ್ಯದ 93 ಕೆಜಿ ಸೇರಿ 1 ಟ್ರಕ್, ಇನ್ನೋವಾ ಕಾರು, 4 ಮೊಬೈಲ್ ಜಪ್ತಿ ಮಾಡಲಾಗಿದೆ. ಆರೋಪಿಗಳು ನಿಟ್ಟೆ ಮೀನಾಕ್ಷಿ ಕಾಲೇಜು ಕಡೆಗೆ ಹೋಗುವ ರಸ್ತೆಯಲ್ಲಿ ಗಾಂಜಾ ಇದ್ದ ಟ್ರಕ್ ನಿಲ್ಲಿಸಿಕೊಂಡು ನಿಂತಿದ್ದರು. ಈ ವೇಳೆ ಖಚಿತ ಮಾಹಿತಿ ಮೇರೆಗೆ ಯಲಹಂಕ ಪೊಲೀಸರು ದಾಳಿ ನಡೆಸಿದ್ದರು.

ಮುಂಬೈನ ಸೈಬರ್ ಖದೀಮರ ಕೈಚಳಕ, ಪೊಲೀಸ್ ತನಿಖೆ

ವೃದ್ಧೆಯಿಂದ 1.24 ಕೋಟಿ ದೋಚಿದ ವಂಚಕರು

ಬೆಂಗಳೂರು: ಮುಂಬೈ ಮೂಲದ ಸೈಬರ್ ವಂಚಕರು ಸಿಬಿಐ ಪೊಲೀಸರ ಹೆಸರಿನಲ್ಲಿ ಬೆಂಗಳೂರಿನ 83 ವರ್ಷದ ವೃದ್ಧೆಗೆ 1 ಕೋಟಿಗೂ ಅಧಿಕ ಹಣ ವಂಚಿಸಿದ್ದಾರೆ.

ಮುಂಬೈ ಪೊಲೀಸರ ಹೆಸರಿನಲ್ಲಿ ಕರೆ ಮಾಡಿದ್ದ ಆರೋಪಿಗಳು, ನಿಮ್ಮ ಮತ್ತೊಂದು ದೂರವಾಣಿ ಸಂಖ್ಯೆಯಿಂದ ಮನಿ ಲ್ಯಾಂಡರಿಂಗ್ ನಡೆಯುತ್ತಿದೆ. ನಿಮ್ಮ ವಿರುದ್ಧ ಮನಿ ಲಾಂಡರಿಂಗ್ ಕೇಸ್ ದಾಖಲಾಗಿದೆ ಎಂದು ವೃದ್ಧೆಗೆ ಬೆದರಿಕೆ ಹಾಕಿದ್ದಾರೆ. ಬಳಿಕ, ಆರೋಪಿಗಳು ವೃದ್ಧೆಯ ಬ್ಯಾಂಕ್ ಖಾತೆಗಳ ಮಾಹಿತಿ ಪಡೆದಿದ್ದಾರೆ. ಆರೋಪಿಗಳ ಬೆದರಿಕೆಗೆ ಹೆದರಿದ ವೃದ್ಧೆ ಆರೋಪಿಗಳ ಖಾತೆ ಹಂತ ಹಂತವಾಗಿ 32 ಲಕ್ಷ ರು., 50 ರು. ಲಕ್ಷ, 32 ಲಕ್ಷ ರು., 10 ಲಕ್ಷ ರು. ಒಟ್ಟು 1.24 ಕೋಟಿ ರು. ಸೈಬರ್ ವಂಚಕರ ಖಾತೆಗೆ ವರ್ಗಾವಣೆ ಮಾಡಿದ್ದಾರೆ.

ಹಣ ಖಾತೆಗೆ ಜಮೆಯಾದ ಬಳಿಕ ಆರೋಪಿಗಳು ಮತ್ತೆ ಸಂಪರ್ಕಿಸದ ಹಿನ್ನೆಲೆಯಲ್ಲಿ ವೃದ್ಧೆ ಅನುಮಾನಗೊಂಡು ಪರಿಶೀಲಿಸಿದಾಗ, ವಂಚನೆಗೆ ಒಳಗಾಗಿರುವುದು ಗೊತ್ತಾಗಿದೆ. ನಂತರ, ಘಟನೆ ನಡೆದು ಎರಡು ತಿಂಗಳ ಬಳಿಕ ವೃದ್ಧೆ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದಾರೆ. ವೃದ್ಧೆಯ ದೂರಿನ ಆಧಾರದ ಮೇಲೆ ಸೈಬರ್ ಕ್ರೈಂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ವಿಡಿಯೊ ಕಾಲ್ ಮೂಲಕ ವಂಚನೆ

ಸೈಬರ್ ವಂಚಕರು ವಿಡಿಯೊ ಕರೆ ಮಾಡಿ ಹೆದರಿಸಿ ಅಮಾಯಕರಿಂದ ಹಣ ವಸೂಲಿ ಮಾಡಿದ ಘಟನೆ ಧಾರವಾಡ ತಾಲೂಕಿನ ಗರಗ ಗ್ರಾಮದಲ್ಲಿ ನಡೆದಿತ್ತು. ರಮೇಶ್ ನೂಲ್ವಿ ಹಣ ಕಳೆದುಕೊಂಡಿದ್ದ ವ್ಯಕ್ತಿ. ಪೊಲೀಸ್ ಬಟ್ಟೆ ಧರಿಸಿದ್ದ ವ್ಯಕ್ತಿಯೊಬ್ಬ ರಮೇಶ್ ನೂಲ್ವಿಗೆ ವಿಡಿಯೋ ಕರೆಮಾಡಿದ್ದ. ಆತ ಪೊಲೀಸ್ ಠಾಣೆಯಲ್ಲಿ ಕುಳಿತು ಮಾತನಾಡುತ್ತಿರುವಂತೆ ಠಾಣೆಯ ಸೆಟ್ ಕೂಡ ಇತ್ತು. ನಿಮ್ಮ ಮೇಲೆ ಅಕ್ರಮ ಹಣ ವರ್ಗಾವಣೆ, ಡ್ರಗ್ಸ್ ಸಾಗಣೆ ಕೇಸು ದಾಖಲಾಗಿದ್ದು, ಕೋರ್ಟ್ ಬಂಧನದ ವಾರೆಂಟ್ ನೀಡಿದೆ ಎಂದು ಹೆದರಿಸಿದ್ದ. ನೀವು ಕೂಡಲೇ ಮುಂಬೈ ಕ್ರೈಂ ಬ್ರ್ಯಾಂಚ್‌ಗೆ ಹಾಜರಾಗಬೇಕೆಂದು ರಮೇಶ್‌ಗೆ ಸೂಚಿಸಿದ್ದ. ಅಲ್ಲದೇ, ನಕಲಿ ವಾರೆಂಟ್ ಪ್ರತಿ ಕೂಡ ಕಳಿಸಿದ್ದ. ಇದನ್ನು ನೋಡಿದ ರಮೇಶ್ ಭಯಗೊಂಡು, ಆರೋಪಿ ಕೇಳಿದ ಖಾತೆಗೆ 3 ಲಕ್ಷ ರು. ಕೂಡಲೇ ವರ್ಗಾಯಿಸಿದ್ದರು. ಬಳಿಕ, ರಮೇಶ್‌ಗೆ ಇವರೆಲ್ಲ ನಕಲಿ ಅಧಿಕಾರಿಗಳು ಎಂಬುವುದು ಗೊತ್ತಾಗಿ ಧಾರವಾಡದ ಸಿಇಎನ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇಂತಹ ಮೋಸಕ್ಕೆ ಯಾರೂ ಬಲಿಯಾಗಬೇಡಿ ಎಂದು ಧಾರವಾಡ ಎಸ್‌ಪಿ ಡಾ.ಗೋಪಾಲ ಬ್ಯಾಕೋಡ್ ಮನವಿ ಮಾಡಿದ್ದಾರೆ.

ಡಿ ಗ್ಯಾಂಗ್‌ಗೆ ಜಾಮೀನು: ಮೇಲ್ಮನವಿಗೆ ಸಿದ್ಧತೆ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ಪವಿತ್ರಾ, ಗೌಡ ಹಾಗೂ ಲಕ್ಷ್ಮಣ್ ಮಂಗಳವಾರ ಜೈಲಿನಿಂದ ಬಿಡುಗಡೆಯಾಗಿದ್ದಾರೆ.

ಜೂನ್ 11ರಂದು ಬಂಧಿಸಲ್ಪಟ್ಟು ಪರಪ್ಪನ ಅಗ್ರಹಾರ ಕಾರಾಗೃಹ ಸೇರಿದ್ದ ಪವಿತ್ರಾ, ಗೌಡ ಹಾಗೂ ಶಿವಮೊಗ್ಗ ಕಾರಾಗೃಹದಲ್ಲಿದ್ದ ಆರೋಪಿ ಲಕ್ಷ್ಮಣ್ ಬಿಡುಗಡೆಯಾಗಿದ್ದಾರೆ. ನಟ ದರ್ಶನ್, ಪವಿತ್ರಾ, ಗೌಡ, ಪ್ರದೋಷ್, ಅನುಕುಮಾರ್, ನಾಗರಾಜ್, ಲಕ್ಷ್ಮಣ್ ಹಾಗೂ ಜಗದೀಶ್‌ಗೆ ಕಳೆದ ಶುಕ್ರವಾರ ಹೈಕೋರ್ಟ್ ಜಾಮೀನು ನೀಡಿತ್ತು. ಎರಡನೇ ಶನಿವಾರ ಹಾಗೂ ಭಾನುವಾರ ರಜೆ ಇದ್ದ ಕಾರಣ ಸೋಮವಾರ ಕೋರ್ಟ್ ಜಾಮೀನು ಪ್ರತಿ ನೀಡಿತ್ತು. ಜೈಲಿನಿಂದ ಹೊರಬಂದ ತಕ್ಷಣ ಪವಿತ್ರಾ, ಗೌಡಗೆ ಸಮೀಪದ ಮುನೇಶ್ವರ ದೇವಾಲಯದೆದುರು ಕುಟುಂಬಸ್ಥರು ದೃಷ್ಟಿ ತೆಗೆದರು. ನಂತರ ಮಾಧ್ಯಮಗಳು ಪ್ರತಿಕ್ರಿಯೆ ಪಡೆಯಲು ಮುಂದಾಗಿದ್ದು, ಯಾವುದಕ್ಕೂ ಉತ್ತರಿಸದೆ ಕಾರಿನಲ್ಲಿ ಮನೆಯತ್ತ ಹೊರಟರು.

ಬಾವನ ಕೊಲೆ: ಸಹೋದರರ ಸೆರೆ

ಬೆಂಗಳೂರು: ಕುಡಿದ ಮತ್ತಿನಲ್ಲಿ ಗಲಾಟೆ ಮಾಡಿದ್ದಲ್ಲದೆ, ಬೈಕ್‌ಗೆ ಬೆಂಕಿ ಹಚ್ಚಿ ತನ್ನ 20 ದಿನದ ಶಿಶುವನ್ನು ಕೊಲ್ಲುವುದಾಗಿ ಬೆದರಿಸಿದ್ದ ಬಾವನನ್ನು ಪತ್ನಿಯ ಸಹೋದರರೇ ಕೊಲೆ ಮಾಡಿದ್ದು, ಮೂವರು ಆರೋಪಿಗಳನ್ನು ನಗರದ ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಲ್ಮಾನ್ ಖಾನ್ (29)ರನ್ನು ಹತ್ಯೆಮಾಡಿದ ಆರೋಪದಡಿ ಪತ್ನಿಯ ಸಹೋದರರಾದ ಉಮರ್, ಶೋಯೆಬ್ ಹಾಗೂ ಅನ್ವರ್ ಎಂಬವರನ್ನು ಬಂಧಿಸಲಾಗಿದೆ. ಸಿದ್ದಾಪುರದಲ್ಲಿ ವಾಸವಾಗಿದ್ದ ಸಲ್ಮಾನ್ ಖಾನ್, ಬೀರು ತಯಾರಿಸುವ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ. ಪತ್ನಿ ಗೃಹಿಣಿ. ದಂಪತಿಗೆ 20 ದಿನದ ಮಗುವಿದೆ. ಕುಡಿತಕ್ಕೆ ದಾಸನಾಗಿದ್ದ ಸಲ್ಮಾನ್ ಕೆಲವು ತಿಂಗಳಿಂದ ಕೆಲಸಕ್ಕೆ ಹೋಗುತ್ತಿರಲಿಲ್ಲ. ಮದ್ಯಪಾನ ಮಾಡಿ ಮನೆಗೆ ಬಂದು ಹೆಂಡತಿಯೊಂದಿಗೆ ಜಗಳ ಮಾಡುತ್ತಿದ್ದ. ಹಲವು ಬಾರಿ ಬುದ್ಧಿವಾದ ಹೇಳಿದರೂ ಮಾತು ಕೇಳದೆ, 'ಚಾಳಿ ಮುಂದುವರೆಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಬೈಕ್‌ಗೆ ಬೆಂಕಿ ಹಚ್ಚಿದ್ದ ಆರೋಪಿ: ಸೋಮವಾರ ರಾತ್ರಿಯೂ ಸಹ ಮದ್ಯದ ನಶೆಯಲ್ಲಿ ಮನೆಗೆ ಬಂದು ಪತ್ನಿಯೊಂದಿಗೆ ಜಗಳ ಮಾಡಿದ್ದ. ಆತನ ಕಾಟ ತಾಳಲಾರದೆ 112ಕ್ಕೆ ಕರೆಮಾಡಿ ಪೊಲೀಸರನ್ನು ಕರೆಯಿಸಿಕೊಳ್ಳುತ್ತಿದ್ದಂತೆ ಸ್ಥಳದಿಂದ ಕಾಲ್ಕಿತ್ತಿದ್ದ. ಮತ್ತೆ ಬಂದು ಮನೆ ಮುಂದೆ ನಿಲ್ಲಿಸಿದ್ದ ಬೈಕ್‌ಗೆ ಬೆಂಕಿಹಚ್ಚಿದ್ದ. ಇದರಿಂದ ಆತಂಕಗೊಂಡ ಪತ್ನಿಯು ತನ್ನ ಸಹೋದರರನ್ನು ಸ್ಥಳಕ್ಕೆ ಕರೆಸಿಕೊಂಡಿದ್ದಳು. ಈ ವೇಳೆ ತನ್ನ ಮಗುವಿಗೆ ಚಾಕು ತೋರಿಸಿ ಕೊಲ್ಲುವುದಾಗಿ ಬೆದರಿಸಿದ್ದಾನೆ. ಆಗ ಆರೋಪಿಗಳು ಮರದ ಕೋಲಿನಿಂದ ಆತನಿಗೆ ಹೊಡೆದು ಮಗುವನ್ನು ಕಸಿದುಕೊಂಡಿದ್ದಾರೆ ಸಲ್ಮಾನ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಮದುವೆ ಆಹ್ವಾನ ಪತ್ರಿಕೆಯಲ್ಲಿ ಮೋದಿ ಪರ ಪ್ರಚಾರ

ವರನ ವಿರುದ್ಧದ ಪ್ರಕರಣ ಹೈಕೋರ್ಟ್ ರದ್ದು

ಬೆಂಗಳೂರು: ನರೇಂದ್ರ ಮೋದಿ ಪರವಾಗಿ ಆಮಂತ್ರಣ ಪತ್ರಿಯಲ್ಲಿ ಮತಯಾಚನೆ ಮಾಡಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಶಿವಪ್ರಸಾದ್ ವಿರುದ್ಧ ಚುನಾವಣಾಧಿಕಾರಿ ದಾಖಲಿಸಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಉಪ್ಪಿನಂಗಡಿ ಠಾಣೆಯಲ್ಲಿ ತಮ್ಮ ವಿರುದ್ಧ ಜನಪ್ರತಿನಿಧಿಗಳ ಕಾಯ್ದೆ 1270ಎ (ಕರಪತ್ರ, ಪೋಸ್ಟರ್ ಇತ್ಯಾದಿ ಮುದ್ರಣಕ್ಕೆ ನಿರ್ಬಂಧ) ಅಡಿ ದಾಖಲಾಗಿರುವ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ನ್ಯಾಯಾಂಗ ಪ್ರಕ್ರಿಯೆ ರದ್ದು ಕೋರಿ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ಆಲಂತಾಯ ಗ್ರಾಮದ ಶಿವಪ್ರಸಾದ್ ಮತ್ತು ಗೋಳಿತೊಟ್ಟಿನ ಎ.ಬಾಲಕೃಷ್ಣ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ, ಮನವಿಯನ್ನು ಪುರಸ್ಕರಿಸಿದೆ. ಅರ್ಜಿದಾರರ ವಿರುದ್ಧದ ಪ್ರಕರಣ ರದ್ದುಪಡಿಸಿ ಆದೇಶ ಹೊರಡಿಸಿದೆ.

ಅಧಿಸೂಚನೆಗೆ ಮುನ್ನ ಆಹ್ವಾನ ಪತ್ರಿಕೆ ಮುದ್ರಣ: ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ವಿನೋದ್ ಕುಮಾರ್, ಚುನಾವಣೆಗೆ ಅಧಿಸೂಚನೆ ಹೊರಡಿಸುವುದಕ್ಕೂ ಮುನ್ನ ಅಂದರೆ ಮಾರ್ಚ್ 1 ರಂದು ಆಹ್ವಾನ ಪತ್ರಿಕೆ ಮುದ್ರಿಸಲಾಗಿತ್ತು. ಆದರೆ, ಮಾ. 16ರಂದು ಚುನಾವಣಾ ಅಧಿಸೂಚನೆ ಹೊರಡಿಸಿದ ಬಳಿಕ ನೀತಿಸಂಹಿತೆ ಜಾರಿಯಾಗಿದೆ. ಹೀಗಾಗಿ ಈ ಪ್ರಕರಣ ಪ್ರಜಾಪ್ರತಿನಿಧಿ ಕಾಯಿದೆಗೆ ಅನ್ವಯವಾಗುವುದಿಲ್ಲ ಎಂದು ಪೀಠಕ್ಕೆ ತಿಳಿಸಿದರು. ವಾದ ಆಲಿಸಿದ ನ್ಯಾಯಪೀಠ ಪ್ರಕರಣ ರದ್ದುಗೊಳಿಸಿತು. ಈ ಹಿಂದೆ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಪೀಠ, ಅರ್ಜಿದಾರ/ ಆರೋಪಿಗಳ ವಿರುದ್ಧ ವಿಚಿತ್ರ ಆರೋಪ ಮಾಡಲಾಗಿದೆ ಎಂದು ಅಭಿಪ್ರಾಯಪಟ್ಟಿತ್ತು.

ಪ್ರಕರಣ ಹಿನ್ನೆಲೆ

ಮುಂದಿನ ಲೋಕಸಭೆ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರನ್ನು ಜಯಶಾಲಿಯನ್ನಾಗಿ ಮಾಡಿ ಮತ್ತೆ ಅವರನ್ನು ಪ್ರಧಾನಿ ಮಾಡುವುದೇ ವಧು-ವರರಿಗೆ ನೀಡುವ ಉಡುಗೊರೆ. ಏಕೆಂದರೆ ನಮ್ಮ ಭವಿಷ್ಯದ ಭಾರತ ಸುಭದ್ರವಾಗಿರಬೇಕು ಎಂಸು ಮದುವೆ ಆಮಂತ್ರಣ ಪತ್ರಿಕೆಯಲ್ಲಿ ಶಿವಪ್ರಸಾದ್ ಅವರು ಮತಯಾಚನೆ ಮಾಡಿದ್ದರು. ಈ ಕುರಿತು ಮಾಹಿತಿ ಗೊತ್ತಾದ ಬಳಿಕ 2024ರ ಲೋಕಸಭಾ ಚುನಾವಣೆ ವೇಳೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಕ್ಷೇತ್ರದ ಫ್ಲೈಯಿಂಗ್ ಸ್ಕ್ವಾಡ್ ಕೆ. ಎನ್. ಸಂದೇಶ್ ಅವರು ಶಿವಪ್ರಸಾದ್ ವಿರುದ್ಧ ಜನಪ್ರತಿನಿಧಿಗಳ ಕಾಯಿದೆಯಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಸಿದ್ದರು. ಈ ಪ್ರಕರಣ ಮತ್ತು ನ್ಯಾಯಾಂಗ ತನಿಖೆ ರದ್ದು ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್ ಪೀಠ ವಿಚಾರಣೆ ನಡೆಸಿ, ಪ್ರಕರಣ ರದ್ದುಪಡಿಸಿದೆ.

ವಕ್ಫ್: ನೋಟಿಸ್ ಹಿಂಪಡೆದ ಕ್ರಮ ಪ್ರಶ್ನಿಸಿದ್ದ ಅರ್ಜಿ ವಜಾ

ಬೆಂಗಳೂರು: ರಾಜ್ಯದಲ್ಲಿ ವಕ್ಫ್ ಆಸ್ತಿ ಒತ್ತುವರಿ ಕುರಿತಂತೆ ರೈತರಿಗೆ ನೀಡಿದ್ದ ನೋಟಿಸ್‌ಗಳನ್ನು ಹಿಂಪಡೆದಿರುವ ಸರಕಾರದ ಆದೇಶ ಪ್ರಶ್ನಿಸಿ ಮತ್ತು ವಕ್ಫ್ ಆಸ್ತಿ ಒತ್ತುವರಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಆದೇಶಿಸಲು ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಬೆಂಗಳೂರಿನ ಸೈಯದ್ ಏಜಾಜ್ ಅಹ್ಮದ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ. ವಿ. ಅರವಿಂದ್ ಅವರ ವಿಭಾಗೀಯ ಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿತು. ಅಲ್ಲದೆ, ಈ ಅರ್ಜಿ ರಾಜಕೀಯ ಪ್ರೇರಿತ ಮತ್ತು ಪ್ರಚಾರಕ್ಕಾಗಿ ಸಲ್ಲಿಸಿದಂತಿದೆ. ಅರ್ಜಿದಾರರ ಪ್ರಾಮಾಣಿಕತೆ ಪ್ರಶ್ನಾರ್ಹವಾಗಿದೆ. ಅರ್ಜಿಯಲ್ಲಿನ ಎಲ್ಲ ಮನವಿಗಳ ಬಗ್ಗೆ ಕಾರ್ಯಾಂಗ ಕ್ರಮ ಕೈಗೊಳ್ಳಬೇಕು. ಅರ್ಜಿಯಲ್ಲಿ ವಿಚಾರಣೆಗೆ ಅರ್ಹವಾದ ಯಾವುದೇ ಅಂಶಗಳಿಲ್ಲ ಎಂದು ಪೀಠ ತಿಳಿಸಿತು.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **09.06.2021** ರಂದು ಕರೆದು ಸಾಲಗಾರ **ಮೊಹಮ್ಮದ್ ಅಜೀಜ್ ಉರ್ ರೆಹಮಾನ್ ಮತ್ತು ಅರುಣಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 65,47,060.44 (ರೂಪಾಯಿಗಳು ಅರವತ್ತೈದು ಲಕ್ಷ ನಲವತ್ತೇಳು ಸಾವಿರದ ಅರವತ್ತು ಮತ್ತು ನಲವತ್ನಾಲ್ಕು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAN00273406** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **04.06.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **13.12.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 65,47,060.44 (ರೂಪಾಯಿಗಳು ಅರವತ್ತೈದು ಲಕ್ಷ ನಲವತ್ತೇಳು ಸಾವಿರದ ಅರವತ್ತು ಮತ್ತು ನಲವತ್ನಾಲ್ಕು ಪೈಸೆ ಮಾತ್ರ) 04.06.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ನಂ.107 ಅಡ್ಮೀಷರಿಂಗ್ ಸೂಪರ್ ಬಿಲ್ಟ್ ಅಪ್ ಏರಿಯಾ 1431 ಚದರ ಅಡಿ ಮೊದಲ ಮಹಡಿಯಲ್ಲಿ ಕಟ್ಟಡದಲ್ಲಿ ''ಎಲೈಟ್ ಗ್ಯಾಂಡ್ಯೂರ್'' ಎಂದು ಹೆಸರುವಾಸಿಯಾಗಿದೆ ಲ್ಯಾಂಡ್ ಬೇರಿಂಗ್ ಎಸ್.ವೈ ನಂ. 15/1, ದೇವರಚಿಕ್ಕನಹಳ್ಳಿ, ಬೇಗೂರು ಹೋಬಳಿ, ದಕ್ಷಿಣ ತಾಲೂಕು, ಬೆಂಗಳೂರು ಗ್ರಾಮಾಂತರ- 560068, ಕರ್ನಾಟಕ.

ದಿನಾಂಕ : 13.12.2024 — **ಅಧಿಕಾರವಿರುವ ಅಧಿಕಾರಿ**
ಸ್ಥಳ : ಬೆಂಗಳೂರು ಗ್ರಾಮಾಂತರ — **ಸಮ್ಮಾನ್ ಕ್ಯಾಪಿಟಲ್ ಲಿ.**
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **04.03.2022** ರಂದು ಕರೆದು ಸಾಲಗಾರ **ಮೊಹಮ್ಮದ್ ಅಜೀಜ್ ಉರ್ ರೆಹಮಾನ್ ಮತ್ತು ಅರುಣಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 8,36,377.98 (ರೂಪಾಯಿಗಳು ಎಂಟು ಲಕ್ಷದ ಮೂವತ್ತಾರು ಸಾವಿರದ ಮುನ್ನೂರ ಎಪ್ಪತ್ತೇಳು ಮತ್ತು ತೊಂಬತ್ತೆಂಟು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAN00278219** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **03.03.2022** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **13.12.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 8,36,377.98 (ರೂಪಾಯಿಗಳು ಎಂಟು ಲಕ್ಷದ ಮೂವತ್ತಾರು ಸಾವಿರದ ಮುನ್ನೂರ ಎಪ್ಪತ್ತೇಳು ಮತ್ತು ತೊಂಬತ್ತೆಂಟು ಪೈಸೆ ಮಾತ್ರ) 03.03.2022** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಬೇರಿಂಗ್ ಸಂಖ್ಯೆ 107 ಅಡ್ಮೀಯರಿಂಗ್ ಸೂಪರ್ ಬಿಲ್ಟ್ ಅಪ್ ಏರಿಯಾ 1431 ಚದರ ಅಡಿ ಮೊದಲ ಮಹಡಿಯಲ್ಲಿ ಅಪಾರ್ಟ್ಮೆಂಟ್ ಕಟ್ಟಡದಲ್ಲಿ ''ಎಲೈಟ್ ಗ್ಯಾಂಡ್ಯೂರ್'' ಎಂದು ಕರೆಯಲ್ಪಡುತ್ತದೆ. ಲ್ಯಾಂಡ್ ಬೇರಿಂಗ್ ಎಸ್‌ವೈ ಮೇಲೆ ನಿರ್ಮಿಸಲಾಗಿದೆ. ಸಂಖ್ಯೆ 15/1ದೇವರಚಿಕ್ಕನಹಳ್ಳಿಯಲ್ಲಿದೆ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಈಗ ಬಿಬಿಎಂಪಿ ಮಿತಿಯಲ್ಲಿ ಖಾತಾ ಸಂಖ್ಯೆ 720/15/1 ಪೂರ್ವದಿಂದ ಪಶ್ಚಿಮಕ್ಕೆ ಅಳತೆ (116+124.5)/2 ಅಡಿ ಹೊಂದಿದೆ ಮತ್ತು ಉತ್ತರದಿಂದ ದಕ್ಷಿಣಕ್ಕೆ (236+222)/2 ಅಡಿ ಸಂಪೂರ್ಣವಾಗಿ 27,537 ಚದರ ಅಡಿ ಅಳತೆ, ಬೆಂಗಳೂರು-560076, ಕರ್ನಾಟಕವು 386.37 ಚದರ ಅಡಿಗಳ ಅವಿಭಜಿತ ಹಂಚಿಕೆಯ ಭೂಮಿ, ಹಕ್ಕು, ಶೀರ್ಷಿಕೆ ಮತ್ತು ಮೇಲಿನ ಭೂಮಿಯಲ್ಲಿ ಆಸಕ್ತಿಯನ್ನು ಹೊಂದಿದೆ.

ಅಧಿಕಾರವಿರುವ ಅಧಿಕಾರಿ
ದಿನಾಂಕ : 13.12.2024 — **ಸಮ್ಮಾನ್ ಕ್ಯಾಪಿಟಲ್ ಲಿ.**
ಸ್ಥಳ : ಬೆಂಗಳೂರು — **(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)**

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 890/2024

ಅರ್ಜಿದಾರರು: ಶ್ರೀಮತಿ ಮುತ್ತಮ್ಮ ಬಿನ್ ಲೇಟ್ ಬಸವಯ್ಯ ವಯಸ್ಸು 72 ವರ್ಷ ವಾಸ: ತಿಗಳರ ಹೊಸಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. 2. ಗ್ರಾಮ ಲೆಕ್ಕಾಧಿಕಾರಿಗಳು, ತಿಗಳರ ಹೊಸಹಳ್ಳಿ ವೃತ್ತ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾತನವರಾದ ಶ್ರೀ ಲಚ್ಮಾ @ ಹೊಟ್ಟೇಗೌಡ ಬಿನ್ ಲೇಟ್ ಚಿಕ್ಕನ್ನೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತಿಗಳರ ಹೊಸಹಳ್ಳಿ ಗ್ರಾಮದಲ್ಲಿ ದಿನಾಂಕ 05.10.1945 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ-ರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 20/01/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

2024ರ ಡಿಸಂಬರ್ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಆರ್.ಗೋಪಾಲಕೃಷ್ಣ
ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 889/2024

ಅರ್ಜಿದಾರರು: ಶ್ರೀಮತಿ ಮುತ್ತಮ್ಮ ಬಿನ್ ಲೇಟ್ ಬಸವಯ್ಯ ವಯಸ್ಸು 72 ವರ್ಷ ವಾಸ: ತಿಗಳರ ಹೊಸಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ [illegible]

[illegible]

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಆರ್.ಗೋಪಾಲಕೃಷ್ಣ
ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 891/2024

ಅರ್ಜಿದಾರರು: ಶ್ರೀಮತಿ ಮುತ್ತಮ್ಮ ಬಿನ್ ಲೇಟ್ ಬಸವಯ್ಯ ವಯಸ್ಸು 72 ವರ್ಷ ವಾಸ: ತಿಗಳರ ಹೊಸಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ [illegible]

[illegible]

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಆರ್.ಗೋಪಾಲಕೃಷ್ಣ
ವಕೀಲರು
ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ:

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಶ್ರೀಮತಿ. ಬೀ ಬೀ ಜಾನ್. ಹೆಚ್**, ಕೋಂ ಶ್ರೀ. ಮೊಹಮದ್ ಆಲಿ ಜಿನ್ನ , ಇವರು ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಶ್ರೀಮತಿ ರೀತಮ್ಮ ಬಿನ್ ಶ್ರೀ.ವ್ಯಾಥ್ಯೂಸ್, ರವರು ಶ್ರೀ.ರಾಮಯ್ಯ.ಜಿ, ಬಿನ್ ಶ್ರೀ.ಗುಡ್ಡಯ್ಯ.ರವರ ಹೆಸರಿಗೆ ಬರೆದುಕೊಟ್ಟಿರುವ ಅಸಲಿ ಮಾರಾಟ ಪತ್ರದ ದಿನಾಂಕ: 22-08-1981, ದಸ್ತಾವೇಜು ನಂ. 867/1981-82, 1ನೇ ಪುಸ್ತಕ, ವಾಲ್ಯೂಮ್ ನಂ.3483, ಪುಟಗಳು 187-189 ಈ ಸ್ವತ್ತು ಬೆಂಗಳೂರು ಉತ್ತರ ತಾಲ್ಲೂಕು, ಉಪ ನೋಂದಣಿ ಕಛೇರಿಯಲ್ಲಿ ನೋಂದಣಿಯಾಗಿರುವ ಅಸಲಿ ಮಾರಾಟ ಪತ್ರವನ್ನು ಕಳೆದುಕೊಂಡಿರುತ್ತಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಗಂಗೂಂಡನಹಳ್ಳಿ ಗ್ರಾಮ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.131, 2ನೇ ಕ್ರಾಸ್‌ನಲ್ಲಿರುವ ದಕ್ಷಿಣ ಭಾಗದಲ್ಲಿರುವ ಸ್ವತ್ತಿನ ಬಿಯರಿಂಗ್ ಹೊಸ ನಂ.91/1, ಹಳೇ ನಂ.ಎಫ್32, ಗ್ರಾಮಾಠಾಣ ಖಾತಾ ನಂ. 11, ರ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ 15 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ, ಒಟ್ಟಾರೆ 600 ಚದರ. ಅಡಿಗಳ ಈ ಸಂಪೂರ್ಣ ಸ್ವತ್ತಿಗೆ ಚಕ್ಕುಬಂದಿ:- **ಪೂರ್ವಕ್ಕೆ** : ಹುಸೇನ್ ಸಾಬ್ ರವರಿಗೆ ಸೇರಿದ ಸ್ವತ್ತು, **ಪಶ್ಚಿಮಕ್ಕೆ** : ಕರಗಯ್ಯನ್ ರವರಿಗೆ ಸೇರಿದ ಮನೆ, **ಉತ್ತರಕ್ಕೆ** : ಅದೇ ಸ್ವತ್ತಿಗೆ ಸೇರಿದ ಉಳಿದ ಭಾಗ, **ದಕ್ಷಿಣಕ್ಕೆ** : ರಸ್ತೆ,

ಎನ್ ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್.ಕಾಲೋನಿ ಬಸ್ ನಿಲ್ದಾಣದ ಹತ್ತಿರ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು-560019.

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 820/2024

ಅರ್ಜಿದಾರರು: 1. ಶ್ರೀ ಮರಿಯಪ್ಪ @ ಚಿಕ್ಕಮರಿಗೌಡ ಬಿನ್ ಲೇಟ್ ದಾಸೇಗೌಡ @ ಗುಂಡೇಗೌಡ ವಯಸ್ಸು 81 ವರ್ಷ ವಾಸ: ತೊಪ್ಪಗಾನಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು: 5. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು ಕನಕಪುರ 6. ಗ್ರಾಮ ಲೆಕ್ಕಾಧಿಕಾರಿಗಳು, ತೊಪ್ಪಗಾನಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ತಂದೆ, 2ನೇ ಅರ್ಜಿದಾರರ ಮಾವ, 3&4ನೇ ಅರ್ಜಿದಾರರ ತಾತನವರಾದ ಶ್ರೀ ದಾಸೇಗೌಡ @ ಗುಂಡೇಗೌಡ ಬಿನ್ ಲೇಟ್ ಹೊಟ್ಟೇಗೌಡ [illegible]

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 555/2024

ಅರ್ಜಿದಾರರು: 1. ಶ್ರೀ ಬಸವರಾಜು ಬಿನ್ ಲೇಟ್ ಸಣ್ಣೇಗೌಡ ವಯಸ್ಸು 50 ವರ್ಷ ವಾಸ: ದ್ಯಾಪೇಗೌಡನದೊಡ್ಡಿ ಗ್ರಾಮ, ಮಳಗಾಳು ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ವಿರುದ್ಧ

ಎದುರುದಾರರು: 1. ಶ್ರೀಮತಿ ಶಿವನಮ್ಮ ಮತ್ತು ಇತರರು 5. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು ಕನಕಪುರ 6. ಗ್ರಾಮ ಲೆಕ್ಕಾಧಿಕಾರಿಗಳು, ದ್ಯಾಪೇಗೌಡನದೊಡ್ಡಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರು ಮತ್ತು ಎದುರುದಾರರಾದ 1 ರಿಂದ 4ನೇ ಎದುರುದಾರರ ತಾತನವರಾದ ಶ್ರೀ ಮರಿದ್ಯಾಪೇಗೌಡ ಬಿನ್ ಲೇಟ್ ಹೊನ್ನೇಗೌಡ ರವರು, [illegible]

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 822/2024

ಅರ್ಜಿದಾರರು: 1. ಶ್ರೀ ಮರಿಯಪ್ಪ @ ಚಿಕ್ಕಮರಿಗೌಡ ಬಿನ್ ಲೇಟ್ ದಾಸೇಗೌಡ @ ಗುಂಡೇಗೌಡ ವಯಸ್ಸು 81 ವರ್ಷ ವಾಸ: ತೊಪ್ಪಗಾನಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು: 5. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು ಕನಕಪುರ 6. ಗ್ರಾಮ ಲೆಕ್ಕಾಧಿಕಾರಿಗಳು, ತೊಪ್ಪಗಾನಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಅಣ್ಣ, 2ನೇ ಅರ್ಜಿದಾರರ ಗಂಡ, 3&4ನೇ ಅರ್ಜಿದಾರರ ದೊಡ್ಡಪ್ಪನವರಾದ ಶ್ರೀ ತಿಮ್ಮೇಗೌಡ ಬಿನ್ ಲೇಟ್ ದಾಸೇಗೌಡ @ ಗುಂಡೇಗೌಡ [illegible]

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 556/2024

ಅರ್ಜಿದಾರರು: 1. ಶ್ರೀ ಬಸವರಾಜು ಬಿನ್ ಲೇಟ್ ಸಣ್ಣೇಗೌಡ ವಯಸ್ಸು 50 ವರ್ಷ ವಾಸ: ದ್ಯಾಪೇಗೌಡನದೊಡ್ಡಿ ಗ್ರಾಮ, ಮಳಗಾಳು ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ವಿರುದ್ಧ

ಎದುರುದಾರರು: 1. ಶ್ರೀಮತಿ ಶಿವನಮ್ಮ ಮತ್ತು ಇತರರು 5. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು ಕನಕಪುರ 6. ಗ್ರಾಮ ಲೆಕ್ಕಾಧಿಕಾರಿಗಳು, ದ್ಯಾಪೇಗೌಡನದೊಡ್ಡಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರು ಮತ್ತು ಎದುರುದಾರರಾದ 1 ರಿಂದ 4ನೇ ಎದುರುದಾರರ ಅಜ್ಜಿಯವರಾದ ಶ್ರೀಮತಿ ದೇವಮ್ಮ ಕೋಂ ಲೇಟ್ ಮ- [illegible]

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 479/2024

ಅರ್ಜಿದಾರರು: ಶ್ರೀಮತಿ ರಾಮ್ಮಮ ಕೋಂ ಲೇಟ್ ರಾಮಯ್ಯ ಬೋವಿ, ವಯಸ್ಸು 68 ವರ್ಷ ವಾಸ: ಉಪ್ಪಕೆರೆದೊಡ್ಡಿ ಗ್ರಾಮ, ಬರಡನಹಳ್ಳಿ ದಾಖಲೆ, ಮಳಗಾಳು ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. 2. ಗ್ರಾಮ ಲೆಕ್ಕಾಧಿಕಾರಿಗಳು, ಬರಡನಹಳ್ಳಿ ವೃತ್ತ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ, 2 ಮತ್ತು 3ನೇ ಅರ್ಜಿದಾರರ ತಂದೆಯವರಾದ ಶ್ರೀ ರಾಮಯ್ಯ ಬೋವಿ ಬಿನ್ ಲೇಟ್ ಮುನಿವೆಂಕಟಾಬೋವಿ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ [illegible]

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 821/2024

ಅರ್ಜಿದಾರರು: 1. ಶ್ರೀ ಮರಿಯಪ್ಪ @ ಚಿಕ್ಕಮರಿಗೌಡ ಬಿನ್ ಲೇಟ್ ದಾಸೇಗೌಡ @ ಗುಂಡೇಗೌಡ ವಯಸ್ಸು 81 ವರ್ಷ ವಾಸ: ತೊಪ್ಪಗಾನಹಳ್ಳಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು: 5. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು ಕನಕಪುರ 6. ಗ್ರಾಮ ಲೆಕ್ಕಾಧಿಕಾರಿಗಳು, ತೊಪ್ಪಗಾನಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ತಾಯಿ, 2ನೇ ಅರ್ಜಿದಾರರ ಅತ್ತೆ, 3&4ನೇ ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ ಸಿಂಗಾರಮ್ಮ ಕೋಂ ಲೇಟ್ ದಾಸೇಗೌಡ @ [illegible]

ಸಮಾಚಾರ ಸಣ್ಣದಲ್ಲ

ಅಂಕಪಟ್ಟಿಯನ್ನು ಪಡೆಯಲು ಸೂಚನೆ

ಬೆಂಗಳೂರು: 2003-04 ರಿಂದ 2021-22ರವರೆಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಅಭ್ಯಸಿಸಿ ಅಂಕಪಟ್ಟಿಯನ್ನು ಸ್ವೀಕರಿಸದೇ ಇರುವ ವಿದ್ಯಾರ್ಥಿಗಳು ಶೀಘ್ರವೇ ಅಂಕಪಟ್ಟಿ, ಪದವಿಪ್ರಮಾಣ ಪತ್ರ ಪಡೆಯುವಂತೆ ದೂರ ಶಿಕ್ಷಣ ನಿರ್ದೇಶನಾಲಯ ತಿಳಿಸಿದೆ. 2003-04 ರಿಂದ 2021-22 ರ ವರೆಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಅಭ್ಯಸಿಸಿ ತಮ್ಮ ಅಂಕಪಟ್ಟಿಗಳನ್ನು ಮತ್ತು 1991 ರಿಂದ 2021ರ ತನಕ ಪದವಿ ಪ್ರಮಾಣ ಪತ್ರ ಸ್ವೀಕರಿಸದ ವಿದ್ಯಾರ್ಥಿಗಳು ಡಿ.11ರಿಂದ 21ರವರೆಗೆ ಬೆಳಗ್ಗೆ 10.30ರಿಂದ 5.00 ಗಂಟೆಯವರೆಗೆ ಬೆಂಗಳೂರು ವಿವಿ ಜ್ಞಾನ ಭಾರತಿ ಆವರಣದ ದೂರಶಿಕ್ಷಣ ನಿರ್ದೇಶನಾಲಯದ ಕಚೇರಿಯಲ್ಲಿ ದೂರಶಿಕ್ಷಣ ವಿಭಾಗದಿಂದ ನೀಡಿರುವ ಗುರುತಿನ ಚೀಟಿ ಹಾಗೂ ಹಾಲ್ ಟಿಕೆಟ್‌ನ್ನುತೋರಿಸಿ ಅಂಕಪಟ್ಟಿಗಳನ್ನು ಹಾಗೂ ಪದವಿ ಪ್ರಮಾಣ ಪತ್ರ ಪಡೆಯತಕ್ಕದ್ದು ಎಂದು ತಿಳಿಸಿದೆ.

ನೀರಿನ ಅದಾಲತ್ ನಾಳೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ವತಿಯಿಂದ ಡಿ.19ರಂದು ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್ ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ನಗರದ ವಾಯುವ್ಯ-2, ವಾಯುವ್ಯ-4, ಕೇಂದ್ರ 1-2, ಈಶಾನ್ಯ - 2, ಉತ್ತರ 1-2, ಉತ್ತರ 2-2, ದಕ್ಷಿಣ 1-2, ದಕ್ಷಿಣ 2-2, ನೈರುತ್ಯ -2, ನೈರುತ್ಯ -5, ಪೂರ್ವ 1-3, ಪೂರ್ವ 2-3, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯ ವಾಣಿ 1916ಗೆ ಕರೆ ಮಾಡಿ ದೂರು ದಾಖಲಿಸಬಹುದು ಎಂದು ಮಂಡಳಿ ತಿಳಿಸಿದೆ.

ಇಂದು ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಡಿ.18 ಹಾಗೂ 19ರಂದು ಬೆಳಗ್ಗೆ 10 ರಿಂದ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ. ನಗರದ ಪದ್ಮನಾಭ ನಗರ ಹಾಗೂ ಆಸ್ಟಿನ್ ಟೌನ್‌ನ ಬನಗಿರಿನಗರ, ಪಾಪಯ್ಯ ಗಾರ್ಡನ್, ಬಾಲಾಜಿ ಕಲ್ಯಾಣ ಮಂಟಪ ಸುತ್ತಮುತ್ತ, ಸಿದ್ದಮ್ಮ ಸಿದ್ದಯ್ಯ ರೆಡ್ಡಿ ಏರಿಯಾ, 9ನೇ ಉಪ ವಿಭಾಗ ಕಚೇರಿ, ಜಯನಗರ ವಿಭಾಗ ಕಚೇರಿ, 30ನೇ ಮೇನ್, 30ನೇ ಕ್ರಾಸ್, ಬಿ.ಎನ್.ಎಂ. ಕಾಲೇಜ್, ಬಿಡಿಎ ಕಾಂಪ್ಲೆಕ್ಸ್, ದೇವಗಿರಿ ದೇವಸ್ಥಾನ, ಬಿಎಸ್‌ಎನ್‌ಎಲ್ ಕಚೇರಿ, ಬನಶಂಕರಿ 2ನೇ ಹಂತ, ಎಸ್‌ಎಲ್‌ವಿ ಹೋಟೆಲ್‌ನಿಂದ 24ನೇ ಕ್ರಾಸ್, ಉಪಹಾರ ಹೋಟೆಲ್, 24ನೇ ಕ್ರಾಸ್, ಚನ್ನಮ್ಮನಕೆರೆ ಅಚ್ಚುಕಟ್ಟು, ಮಂಜುನಾಥ ಕಾಲೋನಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಾಲ್ವರಿಗೆ ಅತಿ ವಿಶಿಷ್ಟ ರೈಲು ಸೇವಾ ಪುರಸ್ಕಾರ

ಬೆಂಗಳೂರು: ಭಾರತೀಯ ರೈಲ್ವೆ ಇಲಾಖೆಯು 101 ಉದ್ಯೋಗಿಗಳು ಹಾಗೂ ಅಧಿಕಾರಿಗಳಿಗೆ ಅತಿ ವಿಶಿಷ್ಟ

ರೈಲು ಸೇವಾ ಪುರಸ್ಕಾರ ನೀಡಲು ನಿರ್ಧರಿಸಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ. ಆಯ್ಕೆಯಾದ ನೌಕರರು, ಅಧಿಕಾರಿಗಳನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಡಿ.21 ರಂದು ನವದೆಹಲಿಯ ಭಾರತ್ ಮಂಟಪಂನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರದಾನ ಮಾಡಲಿದ್ದಾರೆ. ನೈರುತ್ಯ ರೈಲ್ವೆಯಿಂದ ಅವರ ಅತ್ಯುತ್ತಮ ಪ್ರಯತ್ನಗಳಿಗಾಗಿ ನಾಲ್ವರು ರೈಲ್ವೆ ಸಿಬ್ಬಂದಿಯನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ನಾವಿನ್ಯತೆ, ರೈಲ್ವೆ ಆದಾಯ ಹೆಚ್ಚಿಸು ವುದು, ಉತ್ಪಾದಕತೆ ಸಂಧಾರಿಸುವುದು, ಆಮದಿನ ಮೇಲಿನ ಅವಲಂಬನೆ ಕಡಿಮೆ ಮಾಡುವುದು ಮತ್ತು ಸ್ಥಳೀಯ ತಂತ್ರಜ್ಞಾನದ ಬಳಕೆ ಉತ್ತೇಜಿಸುವುದು, ರೈಲ್ವೆಯ ಜೀವ ಮತ್ತು ಆಸ್ತಿಯ ರಕ್ಷಣೆಯಲ್ಲಿ ಈ ಉದ್ಯೋಗಿಗಳ ಶ್ರಮಕ್ಕೆ ಪ್ರತಿಫಲಿಸಿದೆ. ಶಿವಾನಂದ ಟಿ (ಹೆಡ್ ಕಾನ್ಸ್‌ಟೇಬಲ್, ದಾವಣಗೆರೆ, ಮೈಸೂರು ವಿಭಾಗ), ದಿನೇಶ್ ಎನ್.ಗೋಲೆನವರ್ (ಟೆಕ್ನಿಷಿಯನ್, ಗ್ರೇಡ್ 1, ಡೀಸೆಲ್ ಲೋಕೋ ಶೆಡ್, ಹುಬ್ಬಳ್ಳಿ), ರಾಜಾ (ಟೆಕ್ನಿಷಿಯನ್, ಗ್ರೇಡ್ 3, ಬೆಂಗಳೂರು ವಿಭಾಗ), ಶ್ರೀಜಿತ್ ಜೆ.ಬಿ (ಟ್ರ್ಯಾಕ್ ನಿರ್ವಹಣೆ-4, ಹುಬ್ಬಳ್ಳಿ ವಿಭಾಗ) ಪ್ರಶಸ್ತಿಗೆ ಪರಿಗಣಿಸಲಾಗಿದೆ.

{ **ಡಾ. ಜಿ.ಪರಮೇಶ್ವರ್** } ಗೃಹ ಸಚಿವ

ರಾಜ್ಯದಲ್ಲಿ ಸೈಬರ್ ಅಪರಾಧ ನಿಯಂತ್ರಣ ಮತ್ತು ಸೈಬರ್ ಸುರಕ್ಷತೆಗಾಗಿ ಹೊಸದಾಗಿ ಪೊಲೀಸ್ ಮಹಾನಿರ್ದೇಶಕ(ಡಿಜಿಪಿ)ರ ಹುದ್ದೆಯನ್ನು ಸೃಷ್ಟಿಸಲಾಗಿದೆ. ನೂತನ ಡಿಜಿಪಿ ಅಧೀನದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಐಜಿಪಿ, ಎಸ್‌ಪಿ ಮತ್ತು ಕಿರಿಯ ಅಧಿಕಾರಿಗಳು ಇರುತ್ತಾರೆ.

ರಾಜ್ಯಪಾಲರ ಅಧಿಕಾರಕ್ಕೆ ಮೊಟಕು: ಬಿಜೆಪಿ ಸಭಾತ್ಯಾಗ

ಆರ್‌ಡಿಪಿಆರ್ ವಿಶ್ವವಿದ್ಯಾಲಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಲಾಧಿಪತಿ | ರಾಜಕೀಯ ದ್ವೇಷಕ್ಕೆ ಈ ರೀತಿ ಅಧಿಕಾರ ಮೊಟಕುಗೊಳಿಸುವುದು ಸರಿಯಲ್ಲ: ಬಿಜೆಪಿ | ರಾಜ್ಯಪಾಲರು ಸಿಎಂಗಿಂತ ಬ್ಯುಸಿಯಾಗಿದ್ದಾರೆಂದು ಹೇಳಿದ್ದು ಯಾರು: ಬಿಜೆಪಿ

ವಿಧಾನಸಭೆ, ಸುವರ್ಣಸೌಧ: ಭಾರಿ ಚರ್ಚೆಗೆ ಗ್ರಾಸವಾಗಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿ ರಾಜ್ಯಪಾಲರ ಬದಲಿಗೆ ಮುಖ್ಯಮಂತ್ರಿಗಳನ್ನು ಮಾಡುವ ತಿದ್ದುಪಡಿ ವಿಧೇಯಕಕ್ಕೆ, ಪ್ರಬಿಜೆಪಿ-ಜೆಡಿಎಸ್ ಶಾಸಕರ ಸಭಾತ್ಯಾಗದ ಹೊರತಾಗಿಯೂ ವಿಧಾನಸಭೆಯಲ್ಲಿ ಅನುಮೋದನೆ ದೊರೆತಿದೆ.

ವಿಧೇಯಕದಲ್ಲಿರುವ ಪ್ರಮುಖ ತಿದ್ದುಪಡಿ

- ಗ್ರಾಮೀಣಾಭಿವೃದ್ಧಿ ವಿವಿಗೆ ಕುಲಾಧಿಪತಿಯಾಗಿ ರಾಜ್ಯಪಾಲರ ಬದಲಿಗೆ ಮುಖ್ಯಮಂತ್ರಿ
- ವಿಶ್ವವಿದ್ಯಾಲಯದ ನಿರ್ವಹಣೆ ಸರಕಾರದ ಬದಲಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಗೆ
- ಕುಲಪತಿ ನೇಮಕಕ್ಕೆ 10 ವರ್ಷದ ಸೇವೆಯ ಅನುಭವ ಹಾಗೂ ಸಂಶೋಧನೆಯ ಅನುಭವ ಕಡ್ಡಾಯ
- ಯುಜಿಸಿ ಮಾರ್ಗಸೂಚಿಯ ಅನ್ವಯ ಕುಲಪತಿ ನೇಮಕ್ಕೆ ಮಾನದಂಡ ನಿಗದಿ
- ವಿಶ್ವವಿದ್ಯಾಲಯದ ಕಾರ್ಯದಕ್ಷತೆ ಹೆಚ್ಚಿಸಲು ಹಲವು ಕ್ರಮ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ ಮಂಡಿಸಿದರು. ಆದರೆ ಪ್ರತಿಪಕ್ಷ ಬಿಜೆಪಿ-ಜೆಡಿಎಸ್ ಶಾಸಕರು ತಿದ್ದುಪಡಿ ವಿಧೇಯಕದಲ್ಲಿರುವ ಕುಲಪತಿ ನೇಮಕಕ್ಕೆ ಸಹಮತ ವ್ಯಕ್ತಪಡಿಸಿದರೂ, ಕುಲಾಧಿಪತಿಯಾಗಿ ರಾಜ್ಯಪಾಲರ ಬದಲಿಗೆ ಮುಖ್ಯಮಂತ್ರಿ ನೇಮಕ ಹಾಗೂ ಕಾರ್ಯನಿರ್ವಹಣಾ ಮಂಡಳಿಯಲ್ಲಿನ ಬದಲಾವಣೆಗೆ ವಿರೋಧ ವ್ಯಕ್ತಪಡಿಸಿದರು. ಈ ನಡುವೆ ಸರಕಾರ ಹಾಗೂ ರಾಜಭವನದ ನಡುವಿನ ಸಂಘರ್ಷದ ಕಾರಣಕ್ಕೆ ದ್ವೇಷದ ರಾಜಕೀಯ ಮಾಡಲು ಕಾಂಗ್ರೆಸ್ ಹೊರಟಿದೆ ಎಂದು ಬಿಜೆಪಿ ಸದಸ್ಯರು ಆರೋಪಿಸಿದರು.

ವಿವಿಗಳ ಮೇಲೆ ಸರಕಾರದ ಹಿಡಿತ ಸರಿಯಲ್ಲ: ವಿಧೇಯಕ

ಮೇಲಿನ ಚರ್ಚೆಯಲ್ಲಿ ಮಾತನಾಡಿದ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ್, ಎಲ್ಲ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರು ಕುಲಾಧಿಪತಿಗಳಾಗಿರುತ್ತಾರೆ. ಆದರೆ ಅವರ ಬದಲಿಗೆ ಮುಖ್ಯಮಂತ್ರಿಗಳನ್ನು ಮಾಡಲು ಹೊರಟಿರುವ ಹಿಂದೆ ಸುದುದ್ದೇಶವಿಲ್ಲ ಎನ್ನುವ ಅನುಮಾನವಿದೆ. ಶಿಕ್ಷಣ ಗುಣಮಟ್ಟ ಹೆಚ್ಚಿಸಲು ವಿಶ್ವವಿದ್ಯಾಲಯದ ಸ್ವಾಯತ್ತತೆ ಹೆಚ್ಚಿಸಬೇಕು. ಆದರೆ ವಾಪಸು ಸರಕಾರದ ಹಿಡಿತಕ್ಕೆ ವಿಶ್ವವಿದ್ಯಾಲಯಗಳನ್ನು ಪಡೆಯುವುದರಿಂದ ಅಭಿವೃದ್ಧಿ ಸಾಧ್ಯವಿಲ್ಲ. ಆದ್ದರಿಂದ ಸರಕಾರ ಈ ತಿದ್ದುಪಡಿ ತರಬಾರದು. ಇನ್ನು ರಾಜ್ಯಪಾಲರ ಕಾರ್ಯದೊತ್ತಡವನ್ನು ತಗ್ಗಿಸುವ ಕಾರಣಕ್ಕೆ ಮುಖ್ಯಮಂತ್ರಿಗಳನ್ನು ಕುಲಾಧಿಪತಿಯನ್ನಾಗಿ ಮಾಡಲು ಹೊರಟಿದ್ದೇವೆಂದು ಸರಕಾರ ಹೇಳಿದೆ. ಆದರೆ ಮುಖ್ಯಮಂತ್ರಿಗಳಿಗಿಂತ ರಾಜ್ಯಪಾಲರಿಗೆ ಕಾರ್ಯದ ಒತ್ತಡ ಇರುತ್ತದೆಯೇ? ಈ ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ದ್ವೇಷ, ಹೊಟ್ಟೆಕಿಚ್ಚಿನಿಂದ ತಂದಿರುವ ತಿದ್ದುಪಡಿ ಎನಿಸುತ್ತದೆ ಎಂದು ಟೀಕಿಸಿದರು.

ಗ್ರಾಮೀಣಾಭಿವೃದ್ಧಿ ಇಲಾಖೆಯ ಈ ವಿಧೇಯಕವನ್ನು ಪುನರ್‌ಪರಿಶೀಲಿಸಬೇಕು ಎನ್ನುವ ಆಗ್ರಹದ ಹೊರತಾಗಿಯೂ ವಿಧೇಯಕವನ್ನು ಮಂಡಿಸಲು ಸರಕಾರ ಮುಂದಾಯಿತು. ಇದನ್ನು ವಿರೋಧಿಸಿ ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ಸಭಾತ್ಯಾಗ ಮಾಡಿದರು.

ರಾಜಕೀಯ ದುರುದ್ದೇಶವಿಲ್ಲ: ಪ್ರಿಯಾಂಕ್ ಖರ್ಗೆ

ಇದಕ್ಕೂ ಮೊದಲು ಮಾತನಾಡಿದ ಸಚಿವ ಪ್ರಿಯಾಂಕ್ ಖರ್ಗೆ, ತಿದ್ದುಪಡಿ ತರಲು ಹೊರಟಿರುವ ಹಿಂದೆ ಯಾವುದೇ ರಾಜಕೀಯ ದುರುದ್ದೇಶವಿಲ್ಲ. ವಿಶ್ವವಿದ್ಯಾಲಯವನ್ನು ಇನ್ನಷ್ಟು ಅಭಿವೃದ್ಧಿಪರ ಮಾಡುವ ಕಾರಣಕ್ಕೆ ಮಾಡಲಾಗುತ್ತಿದೆ. ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರೇ ಕುಲಾಧಿಪತಿಗಳಾಗಿರಬೇಕು ಎನ್ನುವ ಕಾನೂನು ಎಲ್ಲಿಯೂ ಇಲ್ಲ. ಆದ್ದರಿಂದ ನಾವು ತಿದ್ದುಪಡಿ ತರಲು ಹೊರಟಿದ್ದೇವೆ. ಇದರೊಂದಿಗೆ ಗುಜರಾತ್‌ನಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳಿಗೆ ಮುಖ್ಯಮಂತ್ರಿಗಳೇ ಕುಲಾಧಿಪತಿಗಳಾಗಿದ್ದಾರೆ. ಇದಿಷ್ಟೇ ಅಲ್ಲದೇ, ಬರೋಡಾದ ಎಂ.ಎಸ್.ವಿಶ್ವವಿದ್ಯಾಲಯ, ಬಿಜೆಪಿ ಸರಕಾರವಿರುವ ಅರುಣಾಚಲ ಪ್ರದೇಶದ ವಿಶ್ವವಿದ್ಯಾಲಯಗಳಿಗೆ ಮುಖ್ಯಮಂತ್ರಿಗಳೇ ಕುಲಾಧಿಪತಿಗಳಾಗಿದ್ದಾರೆ. ಆದ್ದರಿಂದ ನಮ್ಮಲ್ಲಿಯೂ ಬದಲಾವಣೆ ತರಲು ಮುಂದಾಗಿದ್ದೇವೆ ಎಂದು ಸ್ಪಷ್ಟಪಡಿಸಿದರು. ಬಿಜೆಪಿ ಶಾಸಕರು ಹೇಳುತ್ತಿರುವಂತೆ ರಾಜ್ಯಪಾಲರ ವಿರುದ್ಧ ಯಾವುದೇ ಆರೋಪ ಹೊರಿಸಿ ಮುಖ್ಯಮಂತ್ರಿಗಳನ್ನು ಕುಲಾಧಿಪತಿಗಳನ್ನಾಗಿ ಮಾಡಿಲ್ಲ. ಪದೇಪದೇ ರಾಜ್ಯಪಾಲರ ವಿರುದ್ಧ ಆರೋಪಪಟ್ಟ ಕೇಳುತ್ತಿರುವ ಹಿಂದಿನ ಕಾರಣವೇನು? ಗುಜರಾತ್ ಸರಕಾರ ಈ ರೀತಿಯ ಬದಲಾವಣೆ ತಂದರೆ ಮಾಸ್ಟರ್ ಸ್ಟ್ರೋಕ್ ಎನ್ನುವ ಬಿಜೆಪಿಗರು, ನಾವು ತಿದ್ದುಪಡಿ ತಂದರೆ ವಿರೋಧಿಸುವುದು ಏಕೆ ಎಂದು ಪ್ರಶ್ನಿಸಿದರು.

ಈಗಾಗಲೇ ಸರಕಾರ ಹಾಗೂ ರಾಜಭವನ ನಡುವೆ ಕಂದಕ ಬಂದಿದೆ ಎನ್ನುವ ಭಾವನೆ ಎಲ್ಲೆಡೆಯಿದೆ. ಈ ತಿದ್ದುಪಡಿಯ ಮೂಲಕ ಈ ಕಂದಕವನ್ನು ಇನ್ನಷ್ಟು ಹೆಚ್ಚಿಸುವುದು ನಿಶ್ಚಳವಾಗಿದೆ. ರಾಜ್ಯಪಾಲರನ್ನು ಕುಲಾಧಿಪತಿ ಸ್ಥಾನದಲ್ಲಿ ಉಳಿಸಿಕೊಳ್ಳುವುದಕ್ಕೆ ಇರುವ ಸಮಸ್ಯೆಯೇನು ಎನ್ನುವುದನ್ನಾದರೂ ಹೇಳಲಿ. ಇದ್ಯಾವುದನ್ನು ಮಾಡದೇ, ರಾಜಕೀಯ ಕಾರಣಕ್ಕೆ ಬದಲಾವಣೆ ತರುವುದು ಶೋಭೆ ತರುವುದಿಲ್ಲ

- ಆರ್.ಅಶೋಕ ಪ್ರತಿಪಕ್ಷ ನಾಯಕ

ರಾಜ್ಯಪಾಲರ ಕಾರ್ಯದೊತ್ತಡದಲ್ಲಿ ವಿಶ್ವವಿದ್ಯಾಲಯಗಳ ನೇಮಕ ಸೇರಿದಂತೆ ಹಲವು ಕಾರ್ಯಗಳಲ್ಲಿ ವಿಳಂಬವಾಗಿರುವುದು ನೋಡಿದ್ದೇವೆ. ಆದ್ದರಿಂದ ರಾಜ್ಯ ಸರಕಾರ ಜಾರಿಗೊಳಿಸಲು ಮುಂದಾಗಿರುವ ಈ ತಿದ್ದುಪಡಿ ವಿಧೇಯಕ ಸ್ವಾಗತಾರ್ಹ. ಇದರೊಂದಿಗೆ ರಾಜ್ಯದ ಸಮಸ್ಯೆಗಳು ಹಾಗೂ ನಾಡಿಮಿಡಿತ ರಾಜ್ಯಪಾಲರಿಗಿಂತ ಸಿಎಂಗೆ ಗೊತ್ತಿರುತ್ತದೆ. ಗುಜರಾತ್‌ನಲ್ಲಿ ಈಗಾಗಲೇ ಎಲ್ಲ ವಿಶ್ವವಿದ್ಯಾಲಯಗಳಿಗೂ ಮುಖ್ಯಮಂತ್ರಿಗಳೇ ಕುಲಾಧಿಪತಿಯಾಗಿದ್ದಾರೆ.

- ಶರತ್ ಬಚ್ಚೇಗೌಡ ಶಾಸಕ

ರಾಜ್ಯಪಾಲರ ಅಧಿಕಾರ ಸಾಂವಿಧಾನಿಕ ಪೀಠವಾಗಿದೆ. ವಿಶ್ವವಿದ್ಯಾಲಯಗಳಿಗೆ ರಾಜಕೀಯ ನಂಟು ಅಂಟಿಸಲು ಹೊರಟರೆ ಉತ್ತಮ ಫಲ ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ತಿದ್ದುಪಡಿಯನ್ನು ಮಾಡದೆ, ವಿಶ್ವವಿದ್ಯಾಲಗಳಿಗೆ ಇನ್ನಷ್ಟು ಶಕ್ತಿ ನೀಡುವ ನಿಟ್ಟಿನಲ್ಲಿ ಏನೆಲ್ಲ ಮಾಡಬಹುದು ಎನ್ನುವ ಬಗ್ಗೆ ಚರ್ಚೆಯಾಗಬೇಕು.

- ಆರಗ ಜ್ಞಾನೇಂದ್ರ, ಶಾಸಕ

ರಾಜ್ಯಪಾಲರ ಬದಲಿಗೆ ಸಿಎಂರನ್ನು ಕುಲಾಧಿಪತಿ ಮಾಡುವ ಹಿಂದಿನ ಕಾರಣವೇನು? ಕುಲಾಧಿಪತಿಯಾಗಿ ರಾಜ್ಯಪಾಲರು ಏನಾದರೂ ತಪ್ಪು ಮಾಡಿದ್ದಾರೆಯೇ? ತಪ್ಪು ಮಾಡದಿದ್ದರೂ ಅಧಿಕಾರ ಮೊಟಕುಗೊಳಿಸಲು ಮುಂದಾಗಿ ರುವುದು ರಾಜಕೀಯ ಪ್ರೇರಿತ ಎನ್ನುವುದು ಸ್ಪಷ್ಟ.

- ಭರತ್ ಶೆಟ್ಟಿ ಶಾಸಕ

ನಾಳೆಯಿಂದ ಪದ್ಮನಾದೋತ್ಸವ

ಬೆಂಗಳೂರು: ಡಾ.ಆರ್‌ಕೆಪಿ ಸರ್ ಅಭಿನಂದನಾ ಸಮಿತಿ ವತಿಯಿಂದ ಡಿ.19 ರಿಂದ 21 ವರೆಗೆ ಪದ್ಮನಾದೋತ್ಸವ ಆಯೋಜಿಸಲಾಗಿದೆ.

ಡಿ.19 ರಂದು ವಾದಿರಾಜ ಕಲಾ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಸೋದೆ ವಾದಿರಾಜ ಮಠದ ಪೀಠಾಧಿಪತಿ ಶ್ರೀ ವಿಶ್ವ ವಲ್ಲಭ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಂಗೀತ ಕಲಾರತ್ನ ಡಾ.ಟಿ.ಎಸ್. ಸತ್ಯವತಿ, ಗಾನಕಲಾಶ್ರೀ ಎಚ್.ಕೆ. ವೆಂಕಟರಾಮ್ ಅವರು ಭಾಗವಹಿಸಲಿದ್ದಾರೆ. ಅಂದು ಆರ್‌ಕೆಪಿ ಗುರುಗಳ ಗೋಷ್ಠಿ, ಪದ್ಮ ನಾಟ್ಯ ನಮನ ಸೇರಿದಂತೆ ಹಲವು ಕಾರ್ಯಕ್ರಮಗಳು ನಡೆಯಲಿದೆ. ಡಿ.20 ರಂದು ಯದುಗಿರಿ ಯತಿರಾಜ ಮಠದ ಪೀಠಾಧಿಪತಿ ಯತಿರಾಜ ಜೀಯರ್ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ. ಆರ್.ಕೆ.ಪಿ ಗಾನ ಸೈನ್ಯದಿಂದ ಕೃತಿಗಳ ಗೋಷ್ಠಿ ಗಾಯನ ನಡೆಯಲಿದೆ. ಪದ್ಮನಾಭದಾಸಾಂಕಿತ ಕೃತಿಗಳ ಗಾಯನ, ತಜ್ಞರ ನುಡಿ, ಶಾಸ್ತ್ರೀಯ ಗಾಯನ ಕಚೇರಿ, ನಡೆಯಲಿದೆ.

ಡಿ.21 ರಂದು ಚೌಡಯ್ಯ ಸ್ಮಾರಕ ಭವನದಲ್ಲಿ ಆರ್‌ಕೆಪಿ ಗುರುಗಳಿಗೆ ಗೌರವ ಸಮರ್ಪಣೆ, ಶಾರದಾ ಕಲಾ ಕೇಂದ್ರದ ವಿದ್ಯಾರ್ಥಿಗಳಿಂದ ಪ್ರಾರ್ಥನೆ, ಸಾಕ್ಷ್ಯಚಿತ್ರದ ಲೋಕಾರ್ಪಣೆಯಾಗಲಿದೆ. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುದ್ದೇನಹಳ್ಳಿಯ ಶ್ರೀ ಸತ್ಯಸಾಯಿ ಗ್ರಾಮದ ಡಾ.ಮೈಸೂರು ಮಂಜುನಾಥ್ ವಹಿಸಲಿದ್ದಾರೆ. ಪದ್ಮ ಕುಸುಮ ಪುಸ್ತಕವನ್ನು ಬಿಡುಗಡೆ ಮಾಡಲಿದ್ದಾರೆ. ಸುವರ್ಣಗಾನ ಮತ್ತು ಬೇವು ಬೆಲ್ಲ ಕನ್ನಡ ಪುಸ್ತಕಗಳು ಬಿಡುಗಡೆ ಮಾಡಲಾಗುತ್ತದೆ. ಹಲವು ವಿಶೇಷ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ತರಹೇವಾರಿ ಊಟೋಪಚಾರ

ಬೆಂಗಳೂರು: ಮೂರು ದಿನಗಳ ಕನ್ನಡ ಸಮ್ಮೇಳನಕ್ಕೆ ಆಗಮಿಸುವವರಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಭರ್ಜರಿ ಊಟೋಪಚಾರದ ವ್ಯವಸ್ಥೆ ಮಾಡಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಮಾತನಾಡಿ, ಕನ್ನಡ ಸಮ್ಮೇಳನದ ಸಂಘಟಕರು 120 ಆಹಾರ ಕೌಂಟರ್‌ಗಳನ್ನು ಸ್ಥಾಪಿಸುವ ನಿರೀಕ್ಷೆಯಿದ್ದು, ಸಮ್ಮೇಳನದ ವೇಳೆ ಮಾಂಸಾಹಾರದ ವ್ಯವಸ್ಥೆ ಮಾಡುವಂತೆ ಬೇಡಿಕೆ ಬಂದಿದೆ. ಇದು ಕನ್ನಡ ಸಮ್ಮೇಳನ ಮತ್ತು ಇಡಿ ರಾಜ್ಯಕ್ಕಾಗಿ ನಡೆಯುತ್ತಿರುವ ಸಮ್ಮೇಳನ. ಹೀಗಾಗಿ ಪ್ರವಾಸಿಗರಿಗೆ ರಾಜ್ಯದ ವಿವಿಧೆಡೆಯಿಂದ ವಿವಿಧ ಬಗೆಯ ಆಹಾರ ನೀಡಲು ಬಯಸುತ್ತೇನೆ. ಈ ಹಿನ್ನೆಲೆ ಸಮ್ಮೇಳನದ ಆಹಾರ ಸಮಿತಿಯು ಕೆಲಸ ಮಾಡುತ್ತಿದೆ. ಮಾಂಸಾಹಾರಕ್ಕೆ ಬೇಡಿಕೆ ಇದ್ದರೂ, ವೆಚ್ಚ ಸೇರಿ ವಿವಿಧ ಕಾರಣಗಳಿಗಾಗಿ ಸಂಘಟಕರು ಸಸ್ಯಾಹಾರ ಮಾತ್ರ ಬಡಿಸುವ ಸಾಧ್ಯತೆಯಿದೆ ಎಂದು ಮಾಹಿತಿ ನೀಡಿದರು. ಸಮ್ಮೇಳನದಲ್ಲಿ ತೆರೆಯಲಾಗುವ 120 ಕೌಂಟರ್‌ಗಳಲ್ಲಿ 2000ಕ್ಕೂ ಅಧಿಕ ಜನರು ಇರಲಿದ್ದು, 1200 ಅಡಿಗೆಯವರು ಇರುತ್ತಾರೆ. ರಾಗಿ ಮುದ್ದೆ, ಕಾಳುಪಲ್ಯ, ಅವರೆಕಾಳು ಸಾರು, ಜೋಳದ ರೊಟ್ಟಿ, ಎಣ್ಣೆಗಾಯಿ ಪಲ್ಯ, ರಾಗಿ ದೋಸೆ, ಟೊಮೆಟೊ ರೈಸ್ ಬಾತ್, ತಟ್ಟೆ ಇಡ್ಲಿ, ವಡೆ, ಅಕ್ಕಿ ರೊಟ್ಟಿ, ಸಿಹಿತಿಂಡಿಗಳಲ್ಲಿ ಕಾಯಿ ಹೋಳಿಗೆ ಹೀಗೆ ಹಲವು ಖಾದ್ಯಗಳನ್ನು ನೀಡಲಾಗುವುದು ಎಂದರು.

31ರಿಂದ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿಯು ಡಿ.31ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರು ಮುಷ್ಕರ ನಡೆಸಲು ಕರೆ ನೀಡಿರುವುದರಿಂದ ಹೊಸ ವರ್ಷದ ಹಿಂದಿನ ದಿನದಂದು ಲಕ್ಷಾಂತರ ಪ್ರಯಾಣಿಕರಿಗೆ ಸಮಸ್ಯೆಯಾಗುವ ಸಾಧ್ಯತೆಯಿದೆ. ಡಿ.14 ರಂದು ರಾಜ್ಯ ಸರಕಾರದ ಪರವಾಗಿ ಸಚಿವ ದಿನೇಶ್ ಗುಂಡೂರಾವ್‌ರು ನಮ್ಮ ಮನವಿ ಸ್ವೀಕರಿಸಿ ಬೇಡಿಕೆಗಳ ಕುರಿತು ಸರಕಾರದೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಸಮಿತಿ ಪದಾಧಿಕಾರಿಗಳು ತಿಳಿಸಿದ್ದಾರೆ.

